ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ದಕ್ಷಿಣ ಆಫ್ರಿಕಾ ವಿರುದ್ಧ ಕಣಕ್ಕಿಳಿಯುತ್ತಿದ್ದಂತೆ, 200 ಅಂತರ ರಾಷ್ಟ್ರೀಯ ಟಿ-20 ಪಂದ್ಯ ಆಡಿದ ಭಾರತದ ಮೊದಲ ಕ್ರಿಕೆಟರ್ ಎಂಬ ದಾಖಲೆ ತಮ್ಮದಾಗಿಸಿಕೊಂಡಿದ್ದಾರೆ.



23 ಜೂನ್, 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 104 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ಹಲಸು : ರೈತರ ಭವಿಷ್ಯ ಬೆಳಸು !? » 2


ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಿ » 3


ಪರಿಷತ್ ಚುನಾವಣೆ : ಬಿಜೆಪಿ ಬಂಡಾಯ ಅಭ್ಯರ್ಥಿ ಗೆಲುವು » 4


# ವಿಶ್ವಾಸ ದ್ರೋಹ: ಬಿಜೆಪಿಯಲ್ಲಿ ಕಂಪನ

## ರಹಸ್ಯ ಸಭೆ ಮಾಹಿತಿ ಇದ್ದರೂ ಉದಾಸೀನ | ಮಾಜಿ ಸಿ.ಎಂ. ಸದಾನಂದಗೌಡ

• ಪ್ರಜೋದಯ ವರದಿ

**ಬೆಂಗಳೂರು:** ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನದಿಂದ ಬಿಜೆಪಿಯಲ್ಲಿ ಕಂಪನ ಶುರುವಾಗಿದ್ದು, ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ವಿಶ್ವಾಸ ದ್ರೋಹ ಸಾಬೀತಿಗೆ ಧರ್ಮಸ್ಥಳದಲ್ಲಿ ನಡೆಸಲು ಉದ್ದೇಶಿಸಿರುವ ಪಕ್ಷದ ಶಾಸಕಾಂಗ ಸಭೆಗೂ ಅಪಸ್ವರ ಕೇಳಿ ಬಂದಿದೆ.

ವಿಧಾನ ಪರಿಷತ್ ಚುನಾವಣೆ ವೇಳೆ ನಡೆದ ವಿದ್ಯಮಾನಗಳ ಕುರಿತು ಹೈಕಮಾಂಡ್ ನಾಯಕರಿಗೆ ವರದಿ ಸಲ್ಲಿಸಲು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಹಾಗು ಬಿ.ವೈ. ವಿಜಯೇಂದ್ರ ದೆಹಲಿಗೆ ತೆರಳಿದ್ದಾರೆ. ಮತ್ತೊಂದೆಡೆ ರಾಜ್ಯ ಬಿಜೆಪಿಯಲ್ಲಿ ತರಹೇವಾರಿ ಚರ್ಚೆಗಳು ನಡೆಯುತ್ತಿವೆ.

ಈ ಬಗ್ಗೆ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ



ಗೌಡ ಅವರು, ಅಡ್ಡ ಮತದಾನಕ್ಕೆ ಸಂಬಂಧಿಸಿ ಅಪಾರ್ಟ್‌ಮೆಂಟ್‌ನಲ್ಲಿ ನಡೆದ ರಹಸ್ಯ ಸಭೆಯ ಮಾಹಿತಿ ಬಿಚ್ಚಿಟ್ಟಿದ್ದಾರೆ. ಪಕ್ಷದ ರಾಜ್ಯ ನಾಯಕರ ಉದಾಸೀನತೆಯೇ ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ಗೆಲುವಿಗೆ ಕಾರಣವೆಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ 5ನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದಾಗಲೇ ನಾವು ಎಚ್ಚೆತ್ತುಕೊಳ್ಳಬೇಕಿತ್ತು. ಜೂ. 13ರಂದು ನನಗೆ ಹೆಬ್ಬಾಳದ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಿಂದ ಕರೆ ಬಂದಿತ್ತು. ಕಾಂಗ್ರೆಸ್‌ನ ನಾಲ್ಕು ಪ್ರಮುಖ ನಾಯಕರು ಮತ್ತು ಬಿಜೆಪಿಯ ಕೆಲ ಶಾಸಕರು ರಹಸ್ಯ ಸಭೆ ನಡೆಸುತ್ತಿದ್ದಾರೆಂದು ವ್ಯಕ್ತಿಯೊಬ್ಬರು ಮಾಹಿತಿ ನೀಡಿದರು. ನಾನು ತಕ್ಷಣವೇ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಆರ್.ಅಶೋಕ್ ಅವರಿಗೆ ಕರೆ ಮಾಡಿದೆ. ಆದರೆ ಇಬ್ಬರೂ ಸಿಗಲಿಲ್ಲ. ತಕ್ಷಣವೇ ರಾಜ್ಯ ಪ್ರಧಾನ ಕಾರ್ಯದರ್ಶಿಯೊಬ್ಬರಿಗೆ ಕರೆ ಮಾಡಿ ವಿಷಯ ತಿಳಿಸಿದೆ. ಅವರು ಸರಿ ನೋಡ್ತೇನೆ ಎಂದರು. ಆದರೆ ಮರುದಿನವೇ ಅದೇ ಅಪಾರ್ಟ್‌ಮೆಂಟ್ ಪಕ್ಕದ ಮತ್ತೊಂದು ಅಪಾರ್ಟ್‌ಮೆಂಟ್‌ನಲ್ಲಿ ಎರಡನೇ ಸಭೆಯೂ ನಡೆಯಿತು. ಆಗಲೂ ನಾನು ಅದೇ ಪ್ರಧಾನ ಕಾರ್ಯದರ್ಶಿಗೆ ಕರೆ ಮಾಡಿ ಎಚ್ಚರಿಸಿದೆ. ಆದರೆ ನಮ್ಮವರು ಗಂಭೀರವಾಗಿ ಪರಿಗಣಿಸಲಿಲ್ಲವೆಂದರು.

ವಿಪರ್ಯಾಸ ಎಂದರೆ, ಅಡ್ಡ ಮತದಾನ ನಡೆದು ಪಕ್ಷಕ್ಕೆ ಭಾರೀ ಮುಖಭಂಗವಾದ ಮೇಲೆ ಅದೇ ಪ್ರಧಾನ ಕಾರ್ಯದರ್ಶಿ ಕರೆ ಮಾಡಿ, ಅಣ್ಣ ನೀವು ಹೇಳಿದ ಹಾಗೆಯೇ ಆಯ್ತಲ್ಲ. ಆಗ ನಾನು ಹೊಳೆ ದಾಟಿದ ಮೇಲೆ ಮತ್ತೇನು ಚರ್ಚೆ ಎಂದು ಬೇಸರದಿಂದ ಸುಮ್ಮನಾಗಿದ್ದೆ ಎಂದರು.

ಧರ್ಮಸ್ಥಳದಲ್ಲಿ ಆಣೆ-ಪ್ರಮಾಣ ವಿಚಾರಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಅವರು, ನಾನು ರಾಜ್ಯಾಧ್ಯಕ್ಷರಿಗೆ ಕರೆ ಮಾಡಿ ಸ್ಪಷ್ಟವಾಗಿ ಹೇಳಿದ್ದೇನೆ. ಯಾವುದೇ ಕಾರಣಕ್ಕೂ ಧರ್ಮದ ಕ್ಷೇತ್ರಕ್ಕೆ ರಾಜಕೀಯವನ್ನು ತೆಗೆದುಕೊಂಡು ಹೋಗಬೇಡಿ. ದೇವರ ಬಳಿ ರಾಜಕೀಯ ಹೋಗುವುದಾದರೆ ಎಲ್ಲವನ್ನೂ ದೇವರಿಗೆ ಬಿಟ್ಟುಬಿಡಿ. ದೇವರೇ ರಾಜಕೀಯ ಮಾಡಲಿ. ನಮ್ಮಿಂದ ರಾಜಕೀಯ ಮಾಡಲು ಆಗದಿದ್ದರೆ ದೇವರಿಗೇ ಬಿಟ್ಟುಬಿಡಿ ಎಂದು ಹೇಳಿರುವುದಾಗಿ ತಿಳಿಸಿದ್ದಾರೆ.

ಮಾಜಿ ಸಚಿವ ಬಿಜೆಪಿಯ ಎಸ್. ಸುರೇಶ್ ಕುಮಾರ್ ಅವರು, ಅಡ್ಡ ಮತದಾನದ ವಿಚಾರವಾಗಿ ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು

» ನಾಲ್ಕನೇ ಪುಟದಲ್ಲಿ

### ಇಂದು ಹೈಕಮಾಂಡ್ ನಾಯಕರಿಗೆ ವರದಿ

ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ನಡೆದ ಪ್ರಕರಣ ಕುರಿತು ಬಿ.ವೈ.ವಿಜಯೇಂದ್ರ ಹಾಗು ಆರ್.ಅಶೋಕ್ ಅವರು ಮಂಗಳವಾರ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಅವರಿಗೆ ಮಾಹಿತಿ ನೀಡಲಿದ್ದಾರೆ.
ಅಡ್ಡ ಮತದಾನದ ಹಿಂದಿನ ವಾಸ್ತವಾಂಶಗಳು, ಯಾವ ಶಾಸಕರು ವಿಪ್ ಉಲ್ಲಂಘಿಸಿದ್ದಾರೆ ಎಂಬಿತ್ಯಾದಿ ವಿಷಯಗಳ ಬಗ್ಗೆ ವರಿಷ್ಟರು ಮಾಹಿತಿ ಪಡೆಯಲಿದ್ದಾರೆ. ಅದರ ಆಧಾರದ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ.
ಈ ವಿದ್ಯಮಾನವು ರಾಜ್ಯ ಬಿಜೆಪಿಯಲ್ಲಿ ನಾಯಕತ್ವದ ಬದಲಾವಣೆ ಅಥವಾ ಶಿಸ್ತುಕ್ರಮಗಳಿಗೆ ದಾರಿ ಮಾಡಿಕೊಡುವ ಸಾಧ್ಯತೆ ಇದೆ ಎಂದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

# ಬಿಡದಿ ಟೌನ್‌ಶಿಪ್: ಬಹಿರಂಗ ಚರ್ಚೆಗೆ ಮುಖ್ಯಮಂತ್ರಿ ಸಮ್ಮತಿ



• ಪ್ರಜೋದಯ ವರದಿ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ವಿಚಾರವಾಗಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಬಹಿರಂಗ ಚರ್ಚೆಯ ಆಹ್ವಾನವನ್ನು ಸ್ವೀಕರಿಸಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ವಿಧಾನಸೌಧದಲ್ಲಿ ಮಾತುಕತೆಗೆ ಸಿದ್ಧ ಎಂದಿದ್ದಾರೆ.

ನೀವು ಪ್ರಾರಂಭಿಸಿರುವ ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿ ತಮ್ಮ ಜೊತೆ ಚರ್ಚಿಸಲು ನಾನು ಉತ್ಸುಕನಾಗಿದ್ದೇನೆಂದು ಪತ್ರದ ಮೂಲಕ ಉತ್ತರಿಸಿದ್ದಾರೆ. ಜೂ. 26ರ ಬೆಳಿಗ್ಗೆ 11 ಗಂಟೆಗೆ ವಿಧಾನಸೌದಕ್ಕೆ ನೀವು ಮತ್ತು ನಿಮ್ಮ ತಂಡದ ಐದು ಪ್ರತಿನಿಧಿಗಳೊಂದಿಗೆ ನನ್ನ ಕಚೇರಿಗೆ ಆಗಮಿಸಿ ಎಂದು ಕುಮಾರಸ್ವಾಮಿ ಅವರಿಗೆ ಆಹ್ವಾನಿಸಿದ್ದಾರೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪತ್ರಕ್ಕೆ ಪ್ರತಿಕ್ರಿಯಿಸಿದ ಹೆಚ್.ಡಿ.ಕುಮಾರಸ್ವಾಮಿ ಅವರು, ನಿಮ್ಮ ಆಹ್ವಾನಕ್ಕೆ ಧನ್ಯವಾದ. ಆದರೆ ಸಾಕಷ್ಟು ರೈತರು ಮತ್ತು ಪಾಲುದಾರರು ಬಿಡದಿ ಟೌನ್‌ಶಿಪ್ ಬಗ್ಗೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪರಿಸರ ಕಾಳಜಿಯನ್ನು ಎತ್ತಿದ್ದಾರೆಂದು ಹೇಳಿದ್ದಾರೆ.

ಪೂರ್ವ ನಿಗದಿತ ಕಾರ್ಯಕ್ರಮಗಳ ಹಿನ್ನಲೆಯಲ್ಲಿ ಜೂ.26ಕ್ಕೆ ಚರ್ಚೆಗೆ ಬರಲು ಆಗುವುದಿಲ್ಲ. ಜೂ. 27ರಂದು ಸಭೆಯನ್ನು ರಾಮಗನಗರ ಜಿಲ್ಲೆಯ ಬಿಡದಿ ಅಥವಾ ಬೈರಮಂಗಲದಲ್ಲೇ ನಿಗದಿಪಡಿಸಿ ಎಂದು ವಿನಂತಿಸಿದ್ದಾರೆ.

# ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಭ್ರಷ್ಟಾಚಾರ ಎಸಗಿಲ್ಲ

## ಕಂದಾಯ ಇಲಾಖೆ ಮೂಲಕ ತನಿಖೆಗೆ ರೈತ ಸಂಘ ಆಗ್ರಹ




• ಪ್ರಜೋದಯ ವರದಿ

**ಬೇಲೂರು :** ತಾಲ್ಲೂಕಿನಲ್ಲಿ ಬಗರ್ ಹುಕುಂ ಯೋಜನೆಯಡಿ ಭೂ ಮಂಜೂರಾತಿಯಲ್ಲಾದ ಲೋಪಗಳಿಗೆ ಮಾಜಿ ಶಾಸಕ ಕೆ.ಎಸ್. ಲಿಂಗೇಶ್ ಅವರನ್ನು ಹೊಣೆಗಾರರನ್ನಾಗಿಸುವುದು ಸರಿಯಲ್ಲವೆಂದು ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಳ್ಳೂರು ಸ್ವಾಮಿಗೌಡ ಅವರು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಸೋಮವಾರ ಮಾತನಾಡಿದ ಅವರು, 2000 ಕೋ. ರೂ. ಹಗರಣ ನಡೆದಿದೆ ಎಂಬ ಆರೋಪಗಳು ಸತ್ಯಕ್ಕೆ ದೂರವಾದುದು. ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಸತ್ಯಾಸತ್ಯತೆ ಹೊರತರಬೇಕೆಂದು ಆಗ್ರಹಿಸಿದರು.

ಸಾಮಾಜಿಕ ಜಾಲತಾಣ ಹಾಗು ಕೆಲವು ಮಾಧ್ಯಮಗಳಲ್ಲಿ ಲಿಂಗೇಶ್ ಅವರ ತೇಜೋವಧೆ ನಡೆಯುತ್ತಿದೆ. ಅದರಿಂದ ಸಾವಿರಾರು ರೈತರ ಗೌರವಕ್ಕೆ ಧಕ್ಕೆಯಾಗುತ್ತಿದೆ. ಕೆಲವು ನ್ಯೂನತೆಗಳಿಗಾಗಿ ಶೇ.99ರಷ್ಟು ಪ್ರಾಮಾಣಿಕ

» ನಾಲ್ಕನೇ ಪುಟದಲ್ಲಿ

### ಲಿಂಗೇಶ್ ಸ್ವಂತಕ್ಕೆ ಅರ್ಜಿ ಸಲ್ಲಿಸಿಲ್ಲ

ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರು ಸ್ವಂತಕ್ಕಾಗಿ ಯಾವುದೇ ಬಗರ್ ಹುಕುಂ ಅರ್ಜಿ ಸಲ್ಲಿಸಿ ಜಮೀನು ಪಡೆದಿಲ್ಲ. ರೈತರು ಸಲ್ಲಿಸಿದ ಅರ್ಜಿಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಿದ ಬಳಿಕವೇ ಬಗರ್ ಹುಕುಂ ಸಮಿತಿ ಮುಂದೆ ಮಂಡಿಸಲಾಗಿದ್ದು, ಸಮಿತಿ ಅಧ್ಯಕ್ಷರಾಗಿ ಅವರು ಸಹಿ ಹಾಕಿದ್ದಾರೆ. ಆದ್ದರಿಂದ ಅಧಿಕಾರಿಗಳ ಪರಿಶೀಲನೆ ಹಾಗು ಸಮಿತಿಯ ಪ್ರಕ್ರಿಯೆಯನ್ನು ಪರಿಗಣಿಸದೆ ಕೇವಲ ಒಬ್ಬರನ್ನೇ ಹೊಣೆಗಾರರನ್ನಾಗಿಸುವುದು ಸರಿಯಲ್ಲವೆಂದು ಬಳ್ಳೂರು ಸ್ವಾಮಿಗೌಡ ಹೇಳಿದರು.

# ಬೆಂಗಳೂರಿನಲ್ಲಿ ಮನೆ ಮಾಡಿಲ್ಲ, ಹಾಸನದಲ್ಲೇ ಇರುತ್ತೇನೆ

• ಪ್ರಜೋದಯ ವರದಿ

**ಹಾಸನ:** ನಾನು ಬೆಂಗಳೂರಿನಲ್ಲಿ ಮನೆ ಮಾಡಿಲ್ಲ, ಹಾಸನದಲ್ಲೇ ಇರುವೆ. ಗೃಹ ಕಚೇರಿಯಲ್ಲಿ ಸಾರ್ವಜನಿಕರಿಗೆ ಯಾವಾಗಲೂ ಸಿಗುತ್ತೇನೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾಜಿ ಶಾಸಕ ಪ್ರೀತಮ್ ಗೌಡ ಅವರಿಗೆ ತಿರುಗೇಟು ನೀಡಿದರು.

ನಗರದ ನಂದಿನಿ ಬಡಾವಣೆ ಹಾಗು ಎಸ್‌ಬಿಎಂ, ಶರಾವತಿ ಬಡಾವಣೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ 1.30 ಕೋ.ರೂ. ವೆಚ್ಚದ ಕಾಂಕ್ರಿಟ್ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಸೋಮವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಸಾರ್ವಜನಿಕರ ಸಮಸ್ಯೆ ಬಗೆಹರಿಸಲು ಅವರು ಕಚೇರಿಗೆ ಬರುವುದಾದರೆ



ಬರಲಿ ಬೇಡ ಎನ್ನಲು ಆಗುವುದಿಲ್ಲ. ಮಹಾನಗರ ಪಾಲಿಕೆ, ಪ್ರಜಾಸೌಧದಲ್ಲಿ ನಿತ್ಯ ಇದ್ದು, ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದೇನೆ. ನಾನೂ ಕೂಡ ಸಾರ್ವಜನಿಕ ಕೆಲಸ ಮಾಡಲು ಬಂದಿದ್ದೇನೆ, ಖಂಡಿತಾ ಮಾಡುತ್ತೇನೆಂದರು.

ಬಿಜೆಪಿ-ಜೆಡಿಎಸ್ ಮೈತ್ರಿ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ಕೆಲವರಿಗೆ ಮೈತ್ರಿ ಇಷ್ಟವಿಲ್ಲ. ಮೈತ್ರಿ ಮುಂದುವರಿದರೆ ಟಿಕೆಟ್ ಕೈ ತಪ್ಪಲಿದೆ ಎಂಬ ಕಾರಣಕ್ಕೆ ವಿರೋಧಿಸುತ್ತಿದ್ದಾರೆ. ಅದರ ಬಗ್ಗೆ ಮಾತನಾಡುವಷ್ಟು ದೊಡ್ಡವನಲ್ಲ, ನಮ್ಮ ಪಕ್ಷದ ನಾಯಕರು ಹೇಳಿದಂತೆ ಕೇಳುವೆ, ಮೈತ್ರಿ ಧರ್ಮ ಪಾಲನೆ ಮಾಡುವೆ ಎಂದು ಉತ್ತರಿಸಿದರು.

ಮನೆ ನಿರ್ಮಾಣ ವೇಳೆ ಸೆಟ್ ಬ್ಯಾಕ್ ಬಿಡಬೇಕೆಂಬ ನಿಯಮ ರಾಜ್ಯಾದ್ಯಂತ ಜಾರಿಯಲ್ಲಿದೆ. ಅದು ಕೇವಲ ಹಾಸನಕ್ಕೆ ಸೀಮಿತವಾದ ಸಮಸ್ಯೆಯಲ್ಲ. ಸಂಬಂಧಪಟ್ಟ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ. ಆರಂಭದ ನಿಯಮಾವಳಿ ಸಡಿಲಗೊಳಿಸಲಾಗಿದೆ. ಈ ಸಂಬಂಧ ಸರ್ಕಾರದಿಂದ ಶೀಘ್ರ ಆದೇಶ ಹೊರಬೀಳಲಿದೆ. ನನ್ನೊಬ್ಬನ ಹಂತದಲ್ಲಿ ಆಗುವುದಿದ್ದರೆ ಧರಣಿ ಮಾಡಿಯಾದರೂ ಕೆಲಸ ಮಾಡಿಸುತ್ತಿದ್ದೆ ಎಂದರು.

ನಗರ ಪಾಲಿಕೆ, ತಾಲ್ಲೂಕು ಕಚೇರಿಯಿಂದ ನಿತ್ಯವೂ ಜನಸಾಮಾನ್ಯರಿಗೆ ಏನೆಲ್ಲಾ ಕೆಲಸ ಆಗಬೇಕೆಂಬುದರ ಬಗ್ಗೆ ಗಮನ ಹರಿಸಲಾಗಿದೆ. ಪಾಲಿಕೆ ಆಡಳಿತಾಧಿಕಾರಿ ನಿತೇಶ್ ಪಾಟೀಲ್ ಅವರೊಂದಿಗೆ ಚರ್ಚಿಸಿ ಹಳೆಯ ಕಾಲದ ಯುಜಿಡಿ ಸರಿಪಡಿಸಲು 14 ಕೋ. ರೂ.ಗೂ ಹೆಚ್ಚು ಅನುದಾನ ತರಲಾಗಿದ್ದು, ಅನೇಕ ಕಡೆ ಕಾಮಗಾರಿ ನಡೆಯುತ್ತಿದೆ ಎಂದು ತಿಳಿಸಿದರು.

ಮಗಹಾನಗರ ಪಾಲಿಕೆಯಲ್ಲಿ ಜನನ-ಮರಣ ಪ್ರಮಾಣ ಪತ್ರ ನೀಡಲು ವಿಳಂಬವಾಗುತ್ತಿತ್ತು. ಸಿಬ್ಬಂದಿ ಕೊರತೆಯಿಂದ ಜನರು ಗಂಟೆಗಟ್ಟಲೇ ಕಾಯಬೇಕಾಗುತ್ತಿತ್ತು. ಈ ಸಮಸ್ಯೆ ಬಗೆಹರಿದಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

# ಬಗರ್ ಹುಕುಂ ಯೋಜನೆಯಡಿ 2,750 ಎಕರೆ ಅಕ್ರಮ ಮಂಜೂರು

## ಕೆ.ಎಸ್.ಲಿಂಗೇಶ್ ಬಂಧನ ಪ್ರಕರಣ | ದೂರುದಾರ ರಾಜಣ್ಣ ಮಾಹಿತಿ

• ಪ್ರಜೋದಯ ವರದಿ

**ಹಾಸನ:** ಬಗರ್ ಹುಕುಂ ಯೋಜನೆಯಡಿ ಬೇಲೂರು ತಾಲ್ಲೂಕಿನಲ್ಲಿ 2750 ಎಕರೆ ಭೂಮಿಯನ್ನು ಅಕ್ರಮವಾಗಿ ಮಂಜೂರು ಮಾಡಲಾಗಿದೆ. ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರ ಅವಧಿಯಲ್ಲೇ ಅಧಿಕ ಪ್ರಮಾಣದ ಅಕ್ರಮ ನಡೆದಿದೆ ಎಂದು ಕೋಲಾರ ಮೂಲದ ದೂರುದಾರ ಕೆ.ಸಿ.ರಾಜಣ್ಣ ಅವರು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಸೋಮವಾರ ಮಾತನಾಡಿದ ಅವರು, ಅಕ್ರಮದ ಕುರಿತು ಸ್ನೇಹಿತರಿಂದ ಮಾಹಿತಿ ತಿಳಿದು 2023ರ ಜ.23ರಂದು ನಾನು ಬೇಲೂರು ಠಾಣೆಗೆ ದೂರು ನೀಡಿದ್ದೆ. ಸ್ಥಳೀಯ ಪೊಲೀಸರು ಎಫ್‌ಐಆರ್ ದಾಖಲಿಸದ ಹಿನ್ನಲೆಯಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ದೂರು ನೀಡಿದ್ದೆ. ತಮ್ಮ ವಿರುದ್ಧ ದಾಖಲಾದ ಪ್ರಕರಣ ರದ್ದು ಪಡಿಸಬೇಕೆಂದು ಕೆ.ಎಸ್.ಲಿಂಗೇಶ್ ಮೇಲ್ಮನವಿ ಸಲ್ಲಿಸಿದ್ದರಾದರೂ ನ್ಯಾಯಾಲಯ ಅದನ್ನು ರದ್ದುಪಡಿಸಿ ಕ್ರಮ ಕೈಗೊಂಡಿದೆ. ಮೂರು ವರ್ಷಗಳ ಬಳಿಕ ಮಾಜಿ ಶಾಸಕ ಸೇರಿ 16 ಜನರನ್ನು ಸಿಐಡಿ ಬಂಧಿಸಿದೆ. ಬಂಧಿತರಲ್ಲಿ ತಹಶೀಲ್ದಾರ್, ಕಂದಾಯ ನಿರೀಕ್ಷಕರು ಹಾಗು ಇತರ ಅಧಿಕಾರಿಗಳಿದ್ದಾರೆಂದರು.



ಇದೊಂದು ದೊಡ್ಡ ಹಗರಣ, ಬರೋಬ್ಬರಿ 2750 ಎಕರೆ ಜಮೀನನ್ನು ನಕಲಿ ದಾಖಲೆ ಸೃಷ್ಟಿ ಮಂಜೂರು ಮಾಡಲಾಗಿದೆ. ಬೆಂಗಳೂರು ಸೇರಿ ಹಲವು ಜಿಲ್ಲೆಯವರಿಗೆ ಹಂಚಿಕೆ ಮಾಡಲಾಗಿದೆ. ಅಪ್ರಾಪ್ತರು, ಮರಣ ಹೊಂದಿದವರ ಹೆಸರಿಗೆ ಭೂಮಿ ನೀಡಲಾಗಿದೆ. ಬಗರ್ ಹುಕುಂ ಅಡಿಯಲ್ಲಿ ಭೂಮಿ ಮಂಜೂರು ಮಾಡಲು ನಿಯಮಗಳಿವೆ. ಸಮಿತಿ ಅಧ್ಯಕ್ಷರು ಶಾಸಕರೇ ಆಗಿರುತ್ತಾರೆ. ದಿ.ರುದ್ರೇಶ್ ಗೌಡ ಅವರ ಆಡಳಿತಾವಧಿಯಲ್ಲೂ ಅಕ್ರಮ ಮಂಜೂರಾತಿ ಆಗಿದೆ ಎಂದು ಆರೋಪಿಸಿದರು.

ಕೆಲವೇ ದಿನಗಳಲ್ಲಿ ಸಿಐಡಿ 42ನೇ ವಿಶೇಷ ಕೋರ್ಟ್‌ಗೆ ದೋಷಾ ರೋಪಣಾ ಪಟ್ಟಿ ಸಲ್ಲಿಸಲಿದ್ದು, ವಿಚಾರಣೆ ನಂತರ ಆರೋಪಿಗಳಿಗೆ ಶಿಕ್ಷೆ ಆಗುವ ವಿಶ್ವಾಸವಿದೆ. 2016 ರಿಂದ 2022ರ ನಡುವೆ ಹಗರಣ ನಡೆದಿದೆ. ಬಗರ್ ಹುಕುಂ ಯೋಜನೆಯಡಿ ಸುಮಾರು 2000 ಸಾವಿರಕ್ಕೂ ಅಧಿಕ ಅರ್ಜಿ ಸಲ್ಲಿಕೆ ಆಗಿದ್ದವು. ಈ ಪೈಕಿ 1430 ಅರ್ಜಿಗಳು ನಕಲಿ ಆಗಿದ್ದು, ಅಷ್ಟೂ ಮಂದಿಗೆ ಭೂಮಿ ಮಂಜೂರಾಗಿದೆ ಎಂದರು.

ಸಕಲೇಶಪುರ ಉಪ ವಿಭಾಗಾಧಿಕಾರಿಯಾಗಿದ್ದ ಪ್ರತೀಕ್ ಬಯಾಲ್ ಎಂಬುವವರು ವಿಸ್ತೃತ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಅದರಲ್ಲಿ ಎಷ್ಟೋ ಪ್ರಕರಣಗಳಲ್ಲಿ ನೈಜತೆ ಇಲ್ಲ, ನಿಯಮ ಗಾಳಿಗೆ ತೂರಲಾಗಿದೆ ಎಂದಿದ್ದರು. ಇಷ್ಟೆಲ್ಲಾ ಲೋಪದೋಷಗಳಿಗೆ ಅಂದು ಶಾಸಕರಾಗಿದ್ದ ಕೆ.ಎಸ್. ಲಿಂಗೇಶ್ ಅವರೇ ನೇರಹೊಣೆ ಎಂದು ದೂರಿದರು.

ಉಮೇಶ್ ಅವರು ತಹಶೀಲ್ದಾರ್ ಆಗಿದ್ದಾಗ 120 ಎಕರೆ, ಬಿ.ಎ. ಜಗದೀಶ್ ಇದ್ದಾಗ 10 ಎಕರೆ, ಪರಮೇಶ್ ಅವಧಿಯಲ್ಲಿ 1240 ಎಕರೆ, ಉಮೇಶ್ ಆಡಳಿತಾವಧಿಯಲ್ಲಿ 11 ಎಕರೆ, ಪುಟ್ಟಶೆಟ್ಟಿ ಎಂಬುವವರು ಇದ್ದಾಗ 893 ಎಕರೆ ಹಾಗು ಮೋಹನ್ ಅವರು ತಹಶೀಲ್ದಾರ್ ಆಗಿದ್ದಾಗ 287 ಎಕರೆ ಅಕ್ರಮ ಮಂಜೂರಾಗಿದೆ. ಸರ್ಕಾರಕ್ಕೆ ಕೋಟ್ಯಾಂತರ ರೂ. ನಷ್ಟ ವುಂಟು ಮಾಡಿರುವ ಜನಪ್ರತಿನಿಧಿ, ಅಧಿಕಾರಿಗಳ ವಿರುದ್ಧ ಕ್ರಮ ಜಾರಿಯಾಗುವವರೆಗೆ ಹೋರಾಟ ಮುಂದುವರಿಯಲಿದೆ ಎಂದರು. ಸುದ್ದಿಗೋಷ್ಟಿಯಲ್ಲಿ ಶ್ರೀಕಾಂತ್ ಇದ್ದರು.

# ಬಸ್ ಟಿಕೆಟ್ ದರ ಏರಿಕೆಗೆ ಪ್ರಸ್ತಾವ

• ಪ್ರಜೋದಯ ವರದಿ

**ಬೆಂಗಳೂರು :** ಡೀಸೆಲ್ ದರ ಏರಿಕೆ ಹಿನ್ನಲೆಯಲ್ಲಿ ಕೆಎಸ್‌ಆರ್‌ಟಿಸಿ ಶೇ.33 ರಷ್ಟು ಹಾಗೂ ಬಿಎಂಟಿಸಿ ಟಿಕೆಟ್ ದರವನ್ನು ಶೇ.44 ರಷ್ಟು ಏರಿಕೆ ಮಾಡುವಂತೆ ಸರ್ಕಾರಕ್ಕೆ ಅಧಿಕೃತವಾಗಿ ಪ್ರಸ್ತಾವನೆ ಸಲ್ಲಿಸ ಲಾಗಿದೆ.

ಆರ್ಥಿಕ ನಷ್ಟ ಹಾಗೂ ಡೀಸೆಲ್ ದರ ಏರಿಕೆಯಿಂದ ರಾಜ್ಯ ಸಾರಿಗೆ ಸಂಸ್ಥೆ ನಷ್ಟ ಅನುಭವಿಸುತ್ತಿದೆ. ಈ ಹಿನ್ನಲೆಯಲ್ಲಿ ಕೆಎಸ್‌ಆರ್‌ಟಿಸಿಯಿಂದ ನಾಲ್ಕು ನಿಗಮಗಳು ಹಾಗೂ ಬಿಎಂಟಿಸಿ ಟಿಕೆಟ್ ದರ ಏರಿಕೆ ಮಾಡುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪ್ರಸ್ತಾವನೆ ಸಲ್ಲಿಸಿದೆ.

ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್ ಟಿಕೆಟ್ ದರ ಏರಿಕೆ ಮಾಡುವ ಕುರಿತು ಶೀಘ್ರದಲ್ಲೇ ನಿರ್ಧಾರ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಶಿವಕುಮಾರ್ ಹೇಳಿದ್ದರು.

# ಅರ್ಥಪೂರ್ಣ ಕೆಂಪೇಗೌಡ ಜಯಂತಿ ಆಚರಣೆಗೆ ನಿರ್ಧಾರ



• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ಜೂ.27 ರಂದು ನಡೆಯಲಿರುವ ನಾಡಪ್ರಭು ಕೆಂಪೇಗೌಡ ಅವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವ ಕುರಿತು ಸೋಮವಾರ ಬೆಳಿಗ್ಗೆ ಆದಿಚುಂಚನಗಿರಿ ಮಠದ ಶ್ರೀ ಶಂಭುನಾಥ ಸ್ವಾಮೀಜಿಯವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಭೆಯಲ್ಲಿ ಭಾಗವಹಿಸಿದ್ದ ಒಕ್ಕಲಿಗ ಸಮುದಾಯದ ಮುಖಂಡರು, ವಿವಿಧ ಸಂಘಟನೆಗಳ ಪ್ರಮುಖರು ಅನೇಕ ಉಪಯುಕ್ತ ಸಲಹೆಗಳನ್ನು ನೀಡಿದರು. ಸಭೆಯಲ್ಲಿ ಭಾಗಿಯಾಗಿದ್ದ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್. ಮುದ್ದೇಗೌಡ ಅವರು, ಕೆಂಪೇಗೌಡ ಜಯಂತಿಯು ಸರ್ಕಾರದ ಕಾರ್ಯಕ್ರಮ ಆಗಿರುವುದರಿಂದ ಜಿಲ್ಲಾಡಳಿತವು ಶಿಷ್ಟಾಚಾರದ ಅನ್ವಯವೇ ಸಮಾರಂಭವನ್ನು ನಡೆಸಬೇಕಾಗುತ್ತದೆ. ಆದರೆ, ಇತ್ತೀಚೆಗೆ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಕರೆಯಲಾ ಗಿದ್ದ ಜಯಂತಿಯ ಪೂರ್ವಭಾವಿ ಸಭೆಯಲ್ಲಿ ಕಾರ್ಯಕ್ರಮವನ್ನು ಸಾಂಕೇತಿಕವಾಗಿ ಸರ್ಕಾರ ನೀಡುವ ಕೇವಲ 50 ಸಾವಿರ ರೂ.ಗಳ ಅನುದಾನದಲ್ಲಿ ಅರ್ಥಪೂರ್ಣ ವಾಗಿ ನಡೆಸಲು ಸಾಧ್ಯವಿಲ್ಲ. ಹಾಗಾಗಿ ಸಮುದಾಯದ ಮುಖಂಡರು, ಆದಿಚುಂಚನಗಿರಿ ಶಾಖಾ ಮಠದ ಶಂಭುನಾಥ ಸ್ವಾಮೀಜಿಯವರ ಸಮ್ಮುಖದಲ್ಲಿ ಚರ್ಚೆ ಮಾಡಿ ಕಾರ್ಯಕ್ರಮದ ರೂಪುರೇಷೆಗಳನ್ನು ಸಿದ್ಧ ಪಡಿಸಲು ಅವಕಾಶ ನೀಡುವಂತೆ ಕೇಳಿಕೊಂಡಿದ್ದರಿಂದ ಸ್ವಾಮೀಜಿಯವರ ಸಮ್ಮುಖದಲ್ಲಿ ಈ ಸಭೆಯನ್ನು ಆಯೋಜಿಸಿರುವುದಾಗಿ ತಿಳಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ತಾರಾನಾಥ್ ಅವರು, ಕಾರ್ಯಕ್ರಮದ ಆಚರಣೆಯ ಕುರಿತು ಮಾಹಿತಿಯನ್ನು ನೀಡಿ, ಸರ್ಕಾರದ ಶಿಷ್ಟಾಚಾರದೊಂದಿಗೆ ಸಮುದಾಯದ ಮುಖಂಡರ ಅಭಿಪ್ರಾಯವನ್ನು ಪರಿಗಣಿಸಿ ಜಯಂತಿ ಆಚರಣೆಗೆ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಹಾಗು ಅಪರ ಜಿಲ್ಲಾಧಿಕಾರಿಯವರು ನಿರ್ದೇಶನ ನೀಡಿದ್ದಾರೆ. ಸರ್ಕಾರದ ಅನುದಾನದ ಪ್ರಕಾರ ಮೂರು ಕಲಾ ತಂಡಗಳನ್ನು ಮಾತ್ರ ಬಳಕೆ ಮಾಡಿಕೊಳ್ಳಲು ಅವಕಾಶ ಇರುತ್ತದೆ ಎಂದರು.

ಸಮುದಾಯದ ಪ್ರಮುಖರ ಸಲಹೆಗಳನ್ನು ಸ್ವೀಕರಿಸಿದ ಬಳಿಕ ಮಾತನಾಡಿದ ಶ್ರೀ ಶಂಭುನಾಥ ಸ್ವಾಮೀಜಿಯವರು ಹಿಂದಿನ ವರ್ಷಗಳಿಗಿಂತಲೂ ವಿಶೇಷವಾಗಿ ಈ ಬಾರಿ ಜಯಂತಿ ಆಚರಣೆ ಆಗಬೇಕಾಗಿದೆ. ಮೆರವಣಿಗೆ ಹಾಗು ಅರ್ಥಪೂರ್ಣ ವೇದಿಕೆ ಕಾರ್ಯಕ್ರಮ ನಡೆಯಬೇಕು. ಸಮಾಜದ ಎಲ್ಲರೂ ಆರ್ಥಿಕ ನೆರವಿನೊಂದಿಗೆ ಕಾರ್ಯಕ್ರಮದ ಯಶಸ್ವಿಗೆ ಸಹಕಾರ ನೀಡಬೇಕು. ತಾವು ಕೂಡ ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಶಾಸಕ ಹೆಚ್.ಪಿ.ಸ್ವರೂಪ್ ಅವರು ಎಲ್ಲರ ನಿರೀಕ್ಷೆಯಂತೆ ಕಾರ್ಯಕ್ರಮಕ್ಕೆ ಸಹಕಾರ ನೀಡುವುದಾಗಿ ತಿಳಿಸಿದರಲ್ಲದೆ, ನಗರದ ಸಿಟಿ ಬಸ್ ನಿಲ್ದಾಣ ಎದುರು ಇರುವ ಪಾರ್ಕ್‌ಗೆ ಹೊಂದಿಕೊಂಡಂತೆ ಕೆಂಪೇಗೌಡ ಪುತ್ಥಳಿಯನ್ನು ಸ್ಥಾಪಿಸುವ ಪ್ರಯತ್ನ ಮಾಡಲಾಗುತ್ತಿದ್ದು, ಮುಂದಿನ ಜಯಂತಿಯ ವೇಳೆಗೆ ಪುತ್ಥಳಿ ಅನಾವರಣದ ತಯಾರಿ ಆಗಬೇಕಾಗಿದೆ. ಈ ಕಾರ್ಯಕ್ಕೆ ಎಲ್ಲರೂ ಸಹಕಾರ ನೀಡಬೇಕೆಂದು ಕೇಳಿಕೊಂಡರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ರಘುಗೌಡ ಅವರು ಸೇರಿ ಸಭೆಯಲ್ಲಿ 200 ಕ್ಕೂ ಹೆಚ್ಚು ಪ್ರಮುಖರು ಭಾಗವಹಿಸಿದ್ದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ ಅವರು ಸ್ವಾಗತಿಸಿದರು.

## ಹೊರ ರಾಜ್ಯದ ಕಾರ್ಮಿಕರೊಂದಿಗೆ ನಿತ್ಯ ಜಗಳ | ಗಸ್ತು ತಿರುಗದ ಪೊಲೀಸರು

# ಹಾಸನದಲ್ಲಿ ಅಪರಾಧ ಕೃತ್ಯ ತಡೆಗೆ ಬೇಕಿದೆ ಕಠಿಣ ಕ್ರಮ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ಜನನಿಬಿಡ ಪ್ರದೇಶಗಳಲ್ಲಿ ಕ್ಷುಲ್ಲಕ ಕಾರಣಕ್ಕೆ ಗಲಾಟೆಗಳು ಹೆಚ್ಚಾಗುತ್ತಿದ್ದು, ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಳ್ಳಬೇಕೆಂಬ ಆಗ್ರಹ ಸಾರ್ವಜನಿಕರಿಂದ ಕೇಳಿ ಬಂದಿದೆ.

ನಗರದ ಸಂತೆಪೇಟೆ ವೃತ್ತದಲ್ಲಿ ಪ್ರತಿ ದಿನವೂ ಬೆಳಿಗ್ಗೆ ಸಮಯದಲ್ಲಿ ಗಲಾಟೆಗಳು ನಡೆಯುತ್ತಲೇ ಇರುತ್ತವೆ. ಕೋಸು, ಶುಂಠಿ ಜಮೀನು ಕೆಲಸಕ್ಕೆ ಹಾಗು ಎಪಿಎಂಸಿಗೆ ಕೂಲಿ ಕಾರ್ಮಿಕರನ್ನು ಪ್ರತಿದಿನ ಇಲ್ಲಿಂದಲೇ ಕರೆದುಕೊಂಡು ಹೋಗಲಾಗುತ್ತದೆ. ಇಲ್ಲಿಂದ ಹೊರ ಜಿಲ್ಲೆ ಹಾಗು ರಾಜ್ಯಗಳಿಗೆ ಸರಕು ಸಾಗಣೆಯಾಗುವುದರಿಂದ ಸಾಕಷ್ಟು ಟ್ರಾನ್ಸ್‌ಪೋರ್ಟ್ ಕಚೇರಿಗಳು ಇಲ್ಲಿವೆ. ಲಾರಿ, ಪಿಕಪ್ ವಾಹನಗಳು ಸಂತೆಪೇಟೆಯಿಂದಲೇ ಕಾರ್ಮಿಕರನ್ನು ಕರೆದುಕೊಂಡು ಹೋಗುತ್ತವೆ. ಕಾರ್ಮಿಕರ ಹಂಚಿಕೆ ವಿಚಾರವಾಗಿ ಟ್ರಾನ್ಸ್‌ಪೋರ್ಟ್‌ನವರು ಮತ್ತು ಕೂಲಿಯರ ಮಧ್ಯೆ ಒಂದಿಲ್ಲೊಂದು ವಿಚಾರವಾಗಿ ಗಲಾಟೆ



ನಡೆಯುತ್ತಿರುತ್ತದೆ. ಬೆಳಿಗ್ಗೆ 6 ರಿಂದ 8 ಗಂಟೆವರೆಗೆ ನಡೆಯುವ ಈ ಪ್ರಹಸನವು ಸ್ಥಳೀಯರಿಗೆ ಕಿರಿಕಿರಿ ಉಂಟು ಮಾಡುತ್ತಿದೆ.

**ಚಾಕು ತೋರಿಸಿದ ಕಾರ್ಮಿಕ**

ಕಳೆದ ಶನಿವಾರ ಬೆಳಿಗ್ಗೆ ಮಹಿಳೆಯೊಬ್ಬರು ಕೋಸು ಲೋಡ್ ಮಾಡಲು ಬಿಹಾರ ಮೂಲದ ಕಾರ್ಮಿಕನನ್ನು ಕರೆದಾಗ ಆತ ಕೆಲಸಕ್ಕೆ ಬರುವುದಿಲ್ಲ ಎಂದನಂತೆ. ಅಷ್ಟಕ್ಕೆ ಆ ಮಹಿಳೆ ಆತನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹೊಡೆದಿದ್ದಾರೆ. ಆಕ್ರೋಶಗೊಂಡ ಯುವಕ ಚಾಕು ತೋರಿಸಿದ್ದ ಎನ್ನಲಾಗಿದೆ. ಇದರಿಂದ ಪರಿಸ್ಥಿತಿ ವಿಷಮಗೊಂಡು ಸ್ಥಳದಲ್ಲೇ ಬಿಗುವಿನ ವಾತಾವರಣ ನಿರ್ಮಾಣವಾಯಿತು. ನಾಲ್ಕೈದು ಜನರು ಸೇರಿ ಕಾರ್ಮಿಕ ಯುವಕನನ್ನು ಹಿಗ್ಗಾ ಮುಗ್ಗಾ ಥಳಿಸಿದರಲ್ಲದೆ ಅವನ ಜೊತೆಗಾರರನ್ನು ಹೊಡೆದಿದ್ದಾರೆ. ಕೂಲಿ ಕೆಲಸಕ್ಕೆ ಹೋಗುವ ವಿಚಾರವಾಗಿ ನಿತ್ಯವೂ ಗಲಾಟೆಗಳು ನಡೆಯುತ್ತಲೇ ಇರುತ್ತವೆ. ಸಂಬಳ ನಿಗದಿ, ಕೆಲಸದ ಭಾರದಿಂದ ಎರಡೂ ಕಡೆಯವರ ನಡುವೆ ವೈಮನಸ್ಸು ಉಂಟಾಗುತ್ತಿದೆ. ಪರಿಸ್ಥಿತಿ ಕೈ ಮೀರಿ ಏನಾದರೂ ಅನಾಹುತ ಸಂಭವಿಸಿದರೆ ಯಾರು ಹೊಣೆ ಎಂಬ ಪ್ರಶ್ನೆ ಕಾಡತೊಡಗಿದೆ.

ನಗರದ ಹೊರವಲಯದ ಶೆಡ್‌ಗಳಲ್ಲಿ ವಾಸವಿರುವ ಹೊರ ರಾಜ್ಯದ ಕಾರ್ಮಿಕರು ದುಶ್ಚಟಗಳ ದಾಸರೂ ಆಗಿರುತ್ತಾರೆ. ಯಾವಾಗಲೂ ಮದ್ಯದ ನಶೆಯಲ್ಲಿರುವ ಅವರನ್ನು ಹಿಡಿದಿಟ್ಟುಕೊಳ್ಳುವುದು ಉದ್ಯೋಗದಾತರಿಗೆ ಸವಾಲಿನ ಕೆಲಸವಾಗಿದೆ. ಕಡಿಮೆ ಸಂಬಳಕ್ಕೆ ಸ್ಥಳೀಯ ಕಾರ್ಮಿಕರು ಕೆಲಸಕ್ಕೆ ಬಾರದಿರುವ ಹಿನ್ನಲೆಯಲ್ಲಿ ಹೊರ ರಾಜ್ಯದವರನ್ನೇ ಅವಲಂಬಿಸಿದ್ದಾರೆ. ಆದರೆ, ಕ್ಷುಲ್ಲಕ ಕಾರಣಗಳು ದೊಡ್ಡ ಅನಾಹುತ ಸೃಷ್ಟಿಸುವ ಸಾಧ್ಯತೆ ಇರುತ್ತದೆ. ನಗರದ ಎನ್.ಆರ್.ವೃತ್ತದಲ್ಲೂ ನಿತ್ಯ ಬೆಳಿಗ್ಗೆ ಕೂಲಿ ಕಾರ್ಮಿಕರು ಗುಂಪು ಗುಂಪಾಗಿ ನಿಲ್ಲುತ್ತಿದ್ದು, ಆಗಾಗ ಘರ್ಷಣೆಗಳು ನಡೆಯುತ್ತಲೇ ಇರುತ್ತವೆ. ಆದ್ದರಿಂದ ಬೆಳಿಗ್ಗೆ ಹೊತ್ತು ಪೊಲೀಸ್ ಗಸ್ತು ಹಾಕಬೇಕೆಂಬುದು ಸ್ಥಳೀಯರ ಒತ್ತಾಯ.

**ಸಣ್ಣ ಪುಟ್ಟ ವಿಚಾರಕ್ಕೂ ಹೊಡೆದಾಟ**

ಇನ್ನು ನಗರದಲ್ಲಿ ಸಂಚಾರ ನಿಯಮ ಸಂಪೂರ್ಣ ಕಣ್ಮರೆಯಾಗಿದೆ. ವಾಹನ ಸವಾರರು ರಸ್ತೆ ನಿಯಮ ಪಾಲಿಸುತ್ತಿಲ್ಲ. ಈ ಬಗ್ಗೆ ಯಾರಾದರೂ ಪ್ರಶ್ನಿಸಿದರೆ ನೇರವಾಗಿ ಅಪದ್ಧಪದ ಬಳಕೆ ಅಥವಾ ಹೊಡೆದಾಟವೇ ಶುರುವಾಗುತ್ತದೆ. ಸಂತೆಪೇಟೆಯಿಂದ ಹನುಮಂತಪುರದವರೆಗೆ ಸಾರ್ವಜನಿಕರು ಓಡಾಡುವುದು ಕಷ್ಟ ಎನ್ನುವಂತಾಗಿದೆ. ಪ್ರತಿದಿನ ಬೆಳಿಗ್ಗೆ ಎಪಿಎಂಸಿಗೆ ತರಕಾರಿ ಸಾಮಾಗ್ರಿ ತರಲು ಹೋಗುವ ಸಾರ್ವಜನಿಕರು ಆತಂಕದಲ್ಲೇ ಇರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

### ಕಣ್ಮರೆಯಾದ ಜನಸ್ನೇಹಿ ಪೊಲೀಸ್ ವ್ಯವಸ್ಥೆ

ನಗರದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಮೂಲಕ ಜನಸ್ನೇಹಿಯಾಗುತ್ತಾರೆಂಬ ಪೊಲೀಸರ ಮೇಲಿನ ನಂಬಿಕೆ ಹುಸಿಯಾಗುತ್ತಲೇ ಇದೆ. ಸಂತೆಪೇಟೆ, 80 ಅಡಿ ರಸ್ತೆ, ಪೆನ್ಷನ್ ಮೊಹಲ್ಲಾ, ಚಿಪ್ಪಿನಕಟ್ಟೆ, ರಿಂಗ್ ರಸ್ತೆಯಲ್ಲಿ ಬೈಕ್ ವ್ಹೀಲಿಂಗ್, ಗಾಂಜಾ ದಂತಹ ಅಮಲು ಪದಾರ್ಥ ಸೇವಿಸಿ ಓಡಾ ಡುವರ ಸಂಖ್ಯೆ ಹೆಚ್ಚುತ್ತಲೇ ಇದೆ. ತಡರಾತ್ರಿ ವರೆಗೆ ಯುವಕರು ರಸ್ತೆಯಲ್ಲಿ ಸಂಚರಿಸು ತ್ತಾರೆ. ಕಾನೂನು ಬಾಹಿರ ಕೃತ್ಯಗಳಿಗೆ ಕಡಿವಾಣ ಹಾಕಬೇಕಿರುವ ಗಸ್ತು ಪೊಲೀಸರು ಮಾತ್ರ ಎಲ್ಲಿಯೂ ಕಾಣಿಸು ವುದಿಲ್ಲ. ಹೀಗಾಗಿ ಸಾರ್ವಜನಿಕರು ಮನೆ ಯಿಂದ ಹೊರಗೆ ಬರಲು ಹಿಂದೇಟು ಹಾಕು ವಂತಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿ ಕಾರಿ ಶುಭನ್ವಿತಾ ಅವರು ಇನ್ನಾದರೂ ಕಾನೂನು ಕಾಪಾಡುವತ್ತ ಗಮನ ಹರಿಸಬೇಕಿದೆ.

# ಹಲಸು: ರೈತರ ಭವಿಷ್ಯ ಬೆಳಸು!?

ಕೆಲವು ಲೇಖನಗಳು ಯೋಜನೆ ಮಾಡಿಕೊಂಡು ಬರೆಯಲ್ಪಡುತ್ತವೆ. ಇನ್ನೂ ಕೆಲವು ಲೇಖನಗಳು ಬದುಕಿನ ಸಣ್ಣ ಸಣ್ಣ ಕ್ಷಣಗಳಿಂದ ಹುಟ್ಟಿಕೊಳ್ಳುತ್ತವೆ. ಈ ಲೇಖನವೂ ಅಂತಹದ್ದೇ.

ನೆನ್ನೆ ಒಬ್ಬ ಆತ್ಮೀಯರು ಪ್ರೀತಿಯಿಂದ ಚಂದ್ರ ಹಲಸು ಕಳುಹಿಸಿದ್ದರು. ಮನೆಯವರ ಜೊತೆ ಕುಳಿತು ಅದರ ಸಿಹಿಯಾದ ತೊಳೆಗಳನ್ನು ಸವಿಯುತ್ತಿದ್ದಾಗ, ಹಲಸಿನ ಬಗ್ಗೆ ಎಷ್ಟು ಕಡಿಮೆ ಮಾತನಾಡುತ್ತೇವೆ ಎಂಬ ಆಲೋಚನೆ ಮೂಡಿತು. ಮಾವು, ದ್ರಾಕ್ಷಿ, ಸೇಬುಗಳ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತವೆ. ಆದರೆ ನಮ್ಮ ಅಂಗಳದಲ್ಲಿ, ನಮ್ಮ ತೋಟಗಳಲ್ಲಿ, ನಮ್ಮ ಬಾಲ್ಯದ ನೆನಪುಗಳಲ್ಲಿ ಆಳವಾಗಿ ಬೇರೂರಿರುವ ಹಲಸಿನ ಬಗ್ಗೆ ನಾವು ಎಷ್ಟು ತಿಳಿದಿದ್ದೇವೆ?

ಒಂದು ತೊಳೆಯ ನಂತರ ಮತ್ತೊಂದು ತೊಳೆ ತಿನ್ನುತ್ತಾ ಅದರ ರುಚಿಯನ್ನು ಸವಿಯುವಾಗ, ಹಲಸಿನ ಮರದ ಮಹತ್ವ ಮನಸ್ಸಿನಲ್ಲಿ ಮೂಡತೊಡಗಿತು. ಒಂದು ಹಣ್ಣು ಮಾತ್ರವಲ್ಲ, ಒಂದು ಸಂಪೂರ್ಣ ಆಹಾರ ವ್ಯವಸ್ಥೆ; ಒಂದು ಮರ ಮಾತ್ರವಲ್ಲ, ಹಲವು ಪೀಳಿಗೆಗಳಿಗೆ ನೆರಳು, ಆಹಾರ ಮತ್ತು ಆದಾಯ ನೀಡುವ ಜೀವಂತ ಆಸ್ತಿ. ಆ ಆಲೋಚನೆಗಳೇ ಈ ಲೇಖನದ ಬೀಜವಾದವು.

ಆದ್ದರಿಂದ ಈ ಬರಹ ಹಲಸಿನ ಹಣ್ಣಿನ ಬಗ್ಗೆ ನಮ್ಮ ನಡುವೆ ಇದ್ದೂ ಕೆಲವೊಮ್ಮೆ ಗಮನಕ್ಕೆ ಬಾರದಿರುವ ಪ್ರಕೃತಿಯ ಒಂದು ಅದ್ಭುತ ಕೊಡುಗೆಯ ಬಗ್ಗೆ. ಬೇಸಿಗೆಯ ದಿನಗಳಲ್ಲಿ ಮನೆ ಅಂಗಳದಲ್ಲಿ ಅಥವಾ ತೋಟದ ಮೂಲೆಗಳಲ್ಲಿ ಹಣ್ಣಿನಿಂದ ತುಂಬಿದ ಹಲಸಿನ ಮರವನ್ನು ನೋಡುವುದೇ ಒಂದು ಸಂತೋಷ. ಗಾತ್ರದಲ್ಲಿ ದೊಡ್ಡದು, ರುಚಿಯಲ್ಲಿ ವಿಶಿಷ್ಟ, ಪೌಷ್ಟಿಕಾಂಶದಲ್ಲಿ ಸಮೃದ್ಧ ಹಾಗೂ ಬಹುಮುಖ ಬಳಕೆಯಿಂದ ಹೆಸರಾದ ಹಲಸು ಭಾರತೀಯ ಕೃಷಿ ಮತ್ತು ಆಹಾರ ಸಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಒಂದು ಕಾಲದಲ್ಲಿ ಸಾಮಾನ್ಯ ಹಣ್ಣೆಂದು ಪರಿಗಣಿಸಲಾಗುತ್ತಿದ್ದ ಹಲಸು, ಇಂದು ಆರೋಗ್ಯಕರ ಆಹಾರ, ಮೌಲ್ಯವರ್ಧಿತ ಉತ್ಪನ್ನಗಳು ಮತ್ತು ರೈತರ ಆದಾಯದ ದೃಷ್ಟಿಯಿಂದ ಹೊಸ ಮಹತ್ವವನ್ನು ಪಡೆದುಕೊಳ್ಳುತ್ತಿದೆ.

**ಪ್ರಕೃತಿಯ ಅಪರೂಪದ ಕೊಡುಗೆ**

ಹಲಸಿನ ಮರವು ದೀರ್ಘಾಯುಷ್ಯ ಹೊಂದಿರುವ ಮರಗಳಲ್ಲಿ ಒಂದು. ಒಮ್ಮೆ ನೆಟ್ಟರೆ ಹಲವು ದಶಕಗಳ ಕಾಲ ಫಲ ನೀಡುವ ಸಾಮರ್ಥ್ಯವನ್ನು ಹೊಂದಿದೆ. ವಿಶೇಷ ನಿರ್ವಹಣೆ ಇಲ್ಲದಿದ್ದರೂ ಉತ್ತಮ ಬೆಳವಣಿಗೆ ಸಾಧಿಸುವ ಈ ಮರ ಪರಿಸರ ಸ್ನೇಹಿಯೂ ಹೌದು. ನೆರಳು ನೀಡುವುದರ ಜೊತೆಗೆ ಮಣ್ಣಿನ ಸಂರಕ್ಷಣೆ ಮತ್ತು ಜೀವವೈವಿಧ್ಯ ಉಳಿಸುವಲ್ಲಿಯೂ ತನ್ನದೇ ಆದ ಪಾತ್ರವನ್ನು ವಹಿಸುತ್ತದೆ.



**ವೈವಿಧ್ಯಮಯ ತಳಿಗಳು**

ಹಲಸಿನ ಅನೇಕ ತಳಿಗಳು ಕಂಡುಬರುತ್ತವೆ. ಕೆಲವು ತಳಿಗಳ ತೊಳೆಗಳು ಗಟ್ಟಿಯಾಗಿದ್ದು ಕಚಗುಳಿಯುವಂತಿರುತ್ತವೆ. ಮತ್ತೆ ಕೆಲವು ಮೃದುವಾಗಿದ್ದು ಹೆಚ್ಚು ಸಿಹಿಯನ್ನು ಹೊಂದಿರುತ್ತವೆ. ಕೆಲವು ಹಣ್ಣುಗಳು ಗಾತ್ರದಲ್ಲಿ ದೊಡ್ಡದಾಗಿದ್ದರೆ, ಕೆಲವು ಸುಗಂಧ ಮತ್ತು ರುಚಿಯಿಂದ ವಿಶೇಷತೆ ಪಡೆದುಕೊಂಡಿವೆ.

ಪ್ರತಿ ಪ್ರದೇಶದಲ್ಲಿಯೂ ಸ್ಥಳೀಯವಾಗಿ ಅಭಿವೃದ್ಧಿಗೊಂಡ ಹಲಸಿನ ತಳಿಗಳು ಕಂಡುಬರುತ್ತವೆ. ಈ ವೈವಿಧ್ಯತೆಯೇ ಹಲಸಿನ ಪ್ರಮುಖ ಶಕ್ತಿಯಾಗಿದೆ. ಕರ್ನಾಟಕದ ಮಲೆನಾಡು ಮತ್ತು ಕರಾವಳಿ ಭಾಗಗಳಲ್ಲಿ ನೂರಕ್ಕೂ ಹೆಚ್ಚು ಸ್ಥಳೀಯ ಹಲಸಿನ ತಳಿಗಳು ಕಂಡುಬರುತ್ತವೆ. ಚಂದ್ರಹಲಸು, ರುದ್ರಾಕ್ಷಿ ಹಲಸು, ತುಪ್ಪದ ಹಲಸು, ಜೇನು ಹಲಸು, ಬಿಳಿ ವರಿಕ್ಕ ಮತ್ತು ಕೆಂಪು ವರಿಕ್ಕ ಮುಂತಾದ ತಳಿಗಳು ತಮ್ಮ ವಿಶಿಷ್ಟ ರುಚಿ, ಪರಿಮಳ ಮತ್ತು ಗುಣಲಕ್ಷಣಗಳಿಂದ ಜನಪ್ರಿಯವಾಗಿವೆ. ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ, ಸಿದ್ದಾಪುರ, ಯಲ್ಲಾಪುರ ಭಾಗಗಳಲ್ಲಿ ರೈತರು ಮತ್ತು ಸಂಶೋಧಕರು 100ಕ್ಕೂ ಹೆಚ್ಚು ಸ್ಥಳೀಯ ಹಲಸಿನ ತಳಿಗಳನ್ನು ದಾಖಲಿಸಿದ್ದಾರೆ. ಕೆಲವು ಅಧ್ಯಯನಗಳಲ್ಲಿ 150ಕ್ಕೂ ಹೆಚ್ಚು ಸ್ಥಳೀಯ ಜಾತಿಗಳ ಉಲ್ಲೇಖವೂ ಕಂಡುಬರುತ್ತದೆ.

**ಒಂದು ಮರ ನೂರಾರು ಉಪಯೋಗ**

ಹಲಸಿನ ಅತ್ಯಂತ ದೊಡ್ಡ ವಿಶೇಷತೆ ಎಂದರೆ ಅದರ ಪ್ರತಿಯೊಂದು ಭಾಗವೂ ಉಪಯುಕ್ತವಾಗಿರುವುದು. ಹಸಿಯಾದ ಹಲಸಿನ ಕಾಯಿ ವಿವಿಧ ಅಡುಗೆಗಳಲ್ಲಿ ಬಳಸಲ್ಪಡುತ್ತದೆ. ಹಣ್ಣಾದ ಹಲಸನ್ನು ನೇರವಾಗಿ ತಿನ್ನುವುದರ ಜೊತೆಗೆ ಹಪ್ಪಳ, ಚಿಪ್ಸ್, ಜಾಮ್, ಹಲ್ವಾ, ಐಸ್‌ಕ್ರೀಮ್ ಮತ್ತು ಇತರ ಆಹಾರ ಉತ್ಪನ್ನಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ.



ಹಲಸಿನ ಬೀಜಗಳೂ ಪೌಷ್ಟಿಕಾಂಶಯುಕ್ತ ಆಹಾರವಾಗಿದ್ದು, ಬೇಯಿಸಿ ಅಥವಾ ಹುರಿದು ಸೇವಿಸಲಾಗುತ್ತದೆ. ಹಲಸಿನ ಮರದ ಕಟ್ಟಿಗೆ ಗಟ್ಟಿತನ ಮತ್ತು ಬಾಳಿಕೆಗೆ ಹೆಸರುವಾಸಿಯಾಗಿದ್ದು, ಪೀಠೋಪಕರಣಗಳು, ಬಾಗಿಲುಗಳು ಮತ್ತು ವಿವಿಧ ಮರದ ಕೆಲಸಗಳಲ್ಲಿ ಬಳಕೆಯಾಗುತ್ತದೆ.

**ಆರೋಗ್ಯದ ಖಜಾನೆ**

ಹಲಸಿನ ಹಣ್ಣಿನಲ್ಲಿ ವಿಟಮಿನ್ ಎ, ವಿಟಮಿನ್ ಸಿ, ಪೊಟ್ಯಾಶಿಯಂ, ನಾರಿನಾಂಶ ಮತ್ತು ವಿವಿಧ ಆ್ಯಂಟಿಆಕ್ಸಿಡೆಂಟ್‌ಗಳು ಸಮೃದ್ಧವಾಗಿವೆ. ಇದು ಜೀರ್ಣಕ್ರಿಯೆಗೆ ಸಹಕಾರಿ ಹಾಗೂ ದೇಹಕ್ಕೆ ತ್ವರಿತ ಶಕ್ತಿಯನ್ನು ಒದಗಿಸುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಪಾಶ್ಚಾತ್ಯ ದೇಶಗಳಲ್ಲಿಯೂ ಹಲಸಿನ ಕಾಯಿ ಹೆಚ್ಚು ಜನಪ್ರಿಯವಾಗುತ್ತಿದೆ. ಅದರ ವಿಶಿಷ್ಟ ರಚನೆ ಮತ್ತು ಪೌಷ್ಟಿಕ ಗುಣಗಳ ಕಾರಣ ಸಸ್ಯಾಹಾರಿ ಆಹಾರ ಪದ್ಧತಿಯಲ್ಲಿ ಇದನ್ನು ವೆಜಿಟೇರಿಯನ್ ಮೀಟ್ ಎಂದು ಕರೆಯಲಾಗುತ್ತಿದೆ.

**ರೈತರಿಗೆ ಹೊಸ ಅವಕಾಶ**

ಹಲಸು ಕೇವಲ ಹಣ್ಣಾಗಿ ಮಾತ್ರವಲ್ಲ, ಮೌಲ್ಯವರ್ಧಿತ ಉತ್ಪನ್ನಗಳ ಮೂಲವಾಗಿಯೂ ಬೆಳೆಯುತ್ತಿದೆ. ಚಿಪ್ಸ್, ಹಿಟ್ಟು, ಪಾನೀಯಗಳು, ಸಿಹಿತಿಂಡಿಗಳು ಮತ್ತು ಇತರ ಉತ್ಪನ್ನಗಳ ತಯಾರಿಕೆಯಿಂದ ಹೊಸ ಮಾರುಕಟ್ಟೆಗಳು ಸೃಷ್ಟಿಯಾಗುತ್ತಿವೆ. ಕಡಿಮೆ ನಿರ್ವಹಣೆಯಲ್ಲಿಯೇ ಉತ್ತಮ ಉತ್ಪಾದನೆ ನೀಡುವ ಕಾರಣ ಹಲಸು ರೈತರಿಗೆ ಹೆಚ್ಚುವರಿ ಆದಾಯದ ಮೂಲವಾಗುವ ಸಾಮರ್ಥ್ಯವನ್ನು ಹೊಂದಿದೆ. ಇತ್ತೀಚಿನ ವರ್ಷಗಳಲ್ಲಿ ಹಲಸಿನ ಹಿಟ್ಟು ಕೂಡ ಸಾಕಷ್ಟು ಗಮನ ಸೆಳೆಯುತ್ತಿದೆ. ಹಲಸಿನ ಸಂರಕ್ಷಣೆ ಮತ್ತು ಮೌಲ್ಯವರ್ಧನೆಗಾಗಿ ಕೆಲಸ ಮಾಡುತ್ತಿರುವ ಹಲವಾರು ಸಂಘಟನೆಗಳು ಹಾಗೂ ಕಾರ್ಯಕರ್ತರು, ವಿಶೇಷವಾಗಿ ಶ್ರೀ ಪಡ್ರೆ ಅವರಂತಹ ಪರಿಸರ ಚಿಂತಕರು, ಹಲಸಿನ ಹಿಟ್ಟಿನ ಬಳಕೆ ಮತ್ತು ಅದರ ಆರ್ಥಿಕ ಸಾಧ್ಯತೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದ್ದಾರೆ. ಸಾಮಾನ್ಯವಾಗಿ ಕಚ್ಚಾ ಹಲಸಿನ ಕಾಯಿಯನ್ನು ಸಂಸ್ಕರಿಸಿ ಹಿಟ್ಟು ತಯಾರಿಸಲಾಗುತ್ತದೆ. ಮಾರುಕಟ್ಟೆಯಲ್ಲಿ ತಾಜಾ ಕಾಯಿ ರೂಪದಲ್ಲಿ ಹೆಚ್ಚಿನ ಬೆಲೆ ಸಿಗದ ಸಂದರ್ಭಗಳಲ್ಲಿ ಅದನ್ನು ಹಿಟ್ಟಾಗಿ ಪರಿವರ್ತಿಸುವ ಮೂಲಕ ರೈತರು ಹೆಚ್ಚುವರಿ ಮೌಲ್ಯವನ್ನು ಸೃಷ್ಟಿಸಬಹುದಾಗಿದೆ.

ಹವಾಮಾನ ಬದಲಾವಣೆಯ ಸವಾಲುಗಳ ನಡುವೆಯೂ ಉತ್ತಮವಾಗಿ ಬೆಳೆಯಬಲ್ಲ ಕೆಲವು ಮರಗಳಲ್ಲಿ ಹಲಸೂ ಒಂದು ಎಂಬ ಅಭಿಪ್ರಾಯವನ್ನು ಕೃಷಿ ತಜ್ಞರು ವ್ಯಕ್ತಪಡಿಸುತ್ತಿದ್ದಾರೆ.

**ಭವಿಷ್ಯದ ಹಣ್ಣು**

ಇಂದು ಜಗತ್ತು ಆರೋಗ್ಯಕರ, ನೈಸರ್ಗಿಕ ಮತ್ತು ಪರಿಸರ ಸ್ನೇಹಿ ಆಹಾರಗಳತ್ತ ಮುಖ ಮಾಡುತ್ತಿದೆ. ಇಂತಹ ಸಂದರ್ಭದಲ್ಲಿ ಹಲಸು ತನ್ನ ಪೌಷ್ಟಿಕ ಗುಣಗಳು, ಬಹುಮುಖ ಬಳಕೆ ಮತ್ತು ಆರ್ಥಿಕ ಮೌಲ್ಯದ ಕಾರಣದಿಂದ ಮತ್ತೊಮ್ಮೆ ಗಮನ ಸೆಳೆಯುತ್ತಿದೆ. ಹಲಸಿನ ಉತ್ತಮ ತಳಿಯನ್ನು ಆಯ್ಕೆ ಮಾಡುವಾಗ ಸಿಹಿ ಮತ್ತು ಗಾತ್ರ ಮಾತ್ರವಲ್ಲ, ಅಂಟಿನ ಪ್ರಮಾಣ, ತೊಳೆಗಳ ಗಟ್ಟಿತನ, ಪರಿಮಳ ಮತ್ತು ನಾರಿನ ಪ್ರಮಾಣವನ್ನೂ ಪರಿಗಣಿಸಲಾಗುತ್ತದೆ. ಕಡಿಮೆ ಅಂಟು ಹೊಂದಿರುವ ಗಮ್‌ಲೆಸ್ ತಳಿಗಳು ಇತ್ತೀಚೆಗೆ ಹೆಚ್ಚು ಜನಪ್ರಿಯವಾಗುತ್ತಿವೆ. ಕಳೆದ ಕೆಲವು ವರ್ಷಗಳಲ್ಲಿ ಕರ್ನಾಟಕದಲ್ಲಿ ಹಲಸಿನ ಬಗ್ಗೆ ಸಾಕಷ್ಟು ಸಂಶೋಧನೆ ನಡೆದಿದೆ. ವಿಶೇಷವಾಗಿ ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಬೆಂಗಳೂರಿನ ಜಿಕೆವಿಕೆ ಮತ್ತು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಹಲಸಿನ ಸ್ಥಳೀಯ ತಳಿಗಳ ಗುರುತಿಸುವಿಕೆ, ಸಂರಕ್ಷಣೆ ಮತ್ತು ವಾಣಿಜ್ಯೀಕರಣದ ಕೆಲಸದಲ್ಲಿ ತೊಡಗಿಕೊಂಡಿವೆ. ಜಿಕೆವಿಕೆ ವಿಜ್ಞಾನಿಗಳು ಜಿಕೆವಿಕೆ ರೆಡ್ ಜ್ಯಾಕ್ ಎಂಬ ಕೆಂಪು ತೊಳೆಗಳ ಹಲಸಿನ ತಳಿಯನ್ನು ಪರಿಚಯಿಸಿದ್ದು, ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ವಿಜ್ಞಾನಿಗಳು ಸಿದ್ದು ಹಲಸು ಸೇರಿದಂತೆ ಹಲವು ವಿಶಿಷ್ಟ ತಳಿಗಳ ದಾಖಲಾತಿ ಮತ್ತು ವಿಸ್ತರಣೆಗೆ ಸಹಕಾರ ನೀಡಿದ್ದಾರೆ.

ನಮ್ಮ ಪೂರ್ವಜರು ಉಳಿಸಿ ಬೆಳೆಸಿದ ಹಲಸಿನ ಮರಗಳು ಕೇವಲ ಹಣ್ಣು ನೀಡುವ ಮರಗಳಲ್ಲ; ಅವು ಆಹಾರ ಭದ್ರತೆ, ಪರಿಸರ ಸಂರಕ್ಷಣೆ ಮತ್ತು ಗ್ರಾಮೀಣ ಆರ್ಥಿಕತೆಯ ಸಂಕೇತಗಳಾಗಿವೆ. ಒಂದು ಕಾಲದಲ್ಲಿ ಸಾಮಾನ್ಯ ಹಣ್ಣೆಂದು ಪರಿಗಣಿಸಲ್ಪಟ್ಟ ಹಲಸು, ಇಂದು ಆರೋಗ್ಯ, ಆದಾಯ ಮತ್ತು ಸುಸ್ಥಿರ ಭವಿಷ್ಯದ ಸಂಕೇತವಾಗಿ ಹೊಸ ಗುರುತನ್ನು ಪಡೆಯುತ್ತಿದೆ. ಒಂದು ಮರ, ನೂರಾರು ಉಪಯೋಗ ಮತ್ತು ಅನೇಕ ಅವಕಾಶಗಳನ್ನು ನೀಡುವ ಹಲಸು ನಿಜಕ್ಕೂ ಪ್ರಕೃತಿಯ ಅಪರೂಪದ ಕೊಡುಗೆ.

**- ಯಶೋದನಂದನ**

### ರೈತರು ಸಾಮಾನ್ಯವಾಗಿ ಹಲಸನ್ನು ಈ ಗುಣಲಕ್ಷಣಗಳ ಆಧಾರದ ಮೇಲೆ ಗುರುತಿಸುತ್ತಾರೆ:

- ತೊಳೆಯ ಬಣ್ಣ
- ಸಿಹಿಯ ಪ್ರಮಾಣ
- ನಾರಿನ ಪ್ರಮಾಣ
- ಪರಿಮಳ
- ಹಣ್ಣಿನ ಗಾತ್ರ
- ಹಣ್ಣಾಗುವ ಕಾಲ
- ಬೀಜದ ಗಾತ್ರ



# ಬಣಗಳ ಸಂಘರ್ಷ: ಬಣಗೆಟ್ಟ ಜನಸಾಮಾನ್ಯರ ಬದುಕು!


> ಇಂದಿನ ಪ್ರಸ್ತುತ ವಿದ್ಯಮಾನಗಳಲ್ಲಿ ಅತ್ಯಂತ ಆತಂಕಕಾರಿ ಸಂಗತಿಯೆಂದರೆ ತಟಸ್ಥ ನಿಲುವಿಗೆ ಜಾಗವೇ ಇಲ್ಲದಂತಾಗಿರುವುದು. ನೀನು ನನ್ನನ್ನು ಬೆಂಬಲಿಸದಿದ್ದರೆ, ನೀನು ನನ್ನ ಶತ್ರು ಎಂಬ ಕಟು ಸತ್ಯ ಇಂದಿನ ಸಮಾಜವನ್ನು ಆಳುತ್ತಿದೆ. ಸಾಮಾನ್ಯ ಮನುಷ್ಯನೊಬ್ಬ ಸರಕಾರವನ್ನೋ ಅಥವಾ ಯಾವುದೇ ವ್ಯವಸ್ಥೆಯನ್ನೋ ಪ್ರಶ್ನಿಸಿದರೆ, ಆತನಿಗೆ ತಕ್ಷಣವೇ ಯಾವುದಾದರೊಂದು ಪಂಥದ ಲೇಬಲ್ ಹಚ್ಚಲಾಗುತ್ತದೆ.

ಒಡಲಾಳ ಪ್ರಕೃತಿಗೆ ಯಾವ ಪಂಥಗಳೂ ಇಲ್ಲ. ಬೆಳಗುವ ಸೂರ್ಯನಿಗೆ, ಹರಿಯುವ ನದಿಗೆ, ಕಷ್ಟದಲ್ಲಿ ಜತೆಯಾಗುವ ನೆರೆಹೊರೆಯವರಿಗೆ ಎಡ ಬಲಗಳ ಭೇದವಿಲ್ಲ. ಹಸಿದ ಹೊಟ್ಟೆಗೆ ಅನ್ನ, ತುತ್ತು ನೀಡುವ ಕೈಗೆ ಯಾವ ಸಿದ್ಧಾಂತದ ಬಣವೂ ಇರುವುದಿಲ್ಲ. ರಾಜಕೀಯ ಚದುರಂಗ ದಾಟದಲ್ಲಿ ಎಡ-ಬಲಗಳು ಅವರವರ ಬೇಳೆ ಬೇಯಿಸಿಕೊಳ್ಳುವ ದಾಳಗಳಷ್ಟೇ.

ಇಂದಿನ ಭಾರತೀಯ ರಾಜಕೀಯ ಸನ್ನಿವೇಶಗಳನ್ನು ಗಮನಿಸಿದರೆ ಒಂದು ಅಂಶ ಸ್ಪಷ್ಟವಾಗುತ್ತಿದೆ. ಇಡೀ ಸಮಾಜವು ಬಲಪಂಥ ಮತ್ತು ಎಡಪಂಥ ಎಂಬ ಎರಡು ಧ್ರುವಗಳಾಗಿ ವಿಭಜನೆ ಗೊಂಡಿದೆ. ಟಿವಿ ಮಾಧ್ಯಮಗಳ ಚರ್ಚೆಗಳಿಂದ ಹಿಡಿದು, ಸಾಮಾಜಿಕ ಜಾಲತಾಣಗಳ ಟ್ರೋಲ್‌ಗಳವರೆಗೆ, ಚಹಾ ಅಂಗಡಿಯ ಹರಟೆಯಿಂದ ಹಿಡಿದು ಸಂಸತ್ತಿನವರೆಗೂ ಈ ಸೈದ್ಧಾಂತಿಕ ಸಂಘರ್ಷವೇ ಪ್ರಮುಖವಾಗಿ ರಾರಾಜಿಸುತ್ತಿದೆ. ಆದರೆ, ಈ ಭಾಷಣಗಳು, ಸಿದ್ಧಾಂತಗಳು ಮತ್ತು ಟ್ವಿಟರ್(ಎಕ್ಸ್) ಯುದ್ಧಗಳ ನಡುವೆ ಯಾರಿಗೂ ಕಾಣದಂತೆ ನಲುಗಿಹೋಗುತ್ತಿರುವುದು ಮಾತ್ರ ಸಾಮಾನ್ಯ ಜನರ ಬದುಕು.

ಧ್ರುವೀಕರಣದ ರಾಜಕಾರಣವು ದಿನನಿತ್ಯದ ಬದುಕನ್ನು ಪ್ರಭಾವಿಸುತ್ತಿದೆ. ಪ್ರಸ್ತುತ ದಿನಗಳಲ್ಲಿ ಬಲ ಮತ್ತು ಎಡಪಂಥಗಳ ಹೋರಾಟ ಕೇವಲ ವೈಚಾರಿಕವಾಗಿ ಉಳಿದಿಲ್ಲ. ಅದು ಜನರ ಭಾವನೆಗಳನ್ನು ಕೆರಳಿಸುವ ಅಸ್ತ್ರವಾಗಿದೆ. ಒಂದೆಡೆ ಬಲಪಂಥ ರಾಷ್ಟ್ರೀಯತೆ, ಸಂಸ್ಕೃತಿ, ಧರ್ಮ ಮತ್ತು ಭದ್ರತೆಯ ಹೆಸರಿನಲ್ಲಿ ಜನರನ್ನು ಸೆಳೆಯಲು ಯತ್ನಿಸುತ್ತಿದೆ. ಇನ್ನೊಂದೆಡೆ ಎಡಪಂಥ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಹಕ್ಕುಗಳ ಹೋರಾಟದ ಹೆಸರಿನಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದೆ.

ಈ ಎರಡು ಸಿದ್ಧಾಂತಗಳ ನಡುವಿನ ಅಹಂ ಮತ್ತು ಅಧಿಕಾರದ ಹಪಾಹಪಿಯ ಮಧ್ಯೆ ಸಾಮಾನ್ಯ ನಾಗರಿಕನ ಮೂಲಭೂತ ಅಗತ್ಯಗಳು ಮೂಲೆಗುಂಪಾಗಿವೆ. ದಿನಬೆಳಗಾದರೆ ತೈಲ ಬೆಲೆ ಏರಿಕೆ, ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿರುವುದು, ನಿರುದ್ಯೋಗ ಮತ್ತು ಭ್ರಷ್ಟಾಚಾರದಂತಹ ನೈಜ ಕಷ್ಟಗಳಿಂದ ಬಳಲುತ್ತಿರುವ ಜನಸಾಮಾನ್ಯನಿಗೆ ಯಾವ ಸಿದ್ಧಾಂತವೂ ತಕ್ಷಣದ ಪರಿಹಾರ ನೀಡುತ್ತಿಲ್ಲ.



ಇಂದಿನ ಪ್ರಸ್ತುತ ವಿದ್ಯಮಾನಗಳಲ್ಲಿ ಅತ್ಯಂತ ಆತಂಕಕಾರಿ ಸಂಗತಿಯೆಂದರೆ ತಟಸ್ಥ ನಿಲುವಿಗೆ ಜಾಗವೇ ಇಲ್ಲದಂತಾಗಿರುವುದು. ನೀನು ನನ್ನನ್ನು ಬೆಂಬಲಿಸದಿದ್ದರೆ, ನೀನು ನನ್ನ ಶತ್ರು ಎಂಬ ಕಟು ಸತ್ಯ ಇಂದಿನ ಸಮಾಜವನ್ನು ಆಳುತ್ತಿದೆ. ಸಾಮಾನ್ಯ ಮನುಷ್ಯನೊಬ್ಬ ಸರಕಾರವನ್ನೋ ಅಥವಾ ಯಾವುದೇ ವ್ಯವಸ್ಥೆಯನ್ನೋ ಪ್ರಶ್ನಿಸಿದರೆ, ಆತನಿಗೆ ತಕ್ಷಣವೇ ಯಾವುದಾದರೊಂದು ಪಂಥದ ಲೇಬಲ್ ಹಚ್ಚಲಾಗುತ್ತದೆ.

ಬಲಪಂಥೀಯರನ್ನು ಪ್ರಶ್ನಿಸಿದರೆ ದೇಶದ್ರೋಹಿ ಅಥವಾ ಎಡಪಂಥೀಯ ಎನ್ನಲಾಗುತ್ತದೆ; ಅದೇ ರೀತಿ ಎಡಪಂಥೀಯರ ನಿಲುವುಗಳನ್ನು ಒಪ್ಪದಿದ್ದರೆ ಕೋಮುವಾದಿ ಎಂದು ಬಿಂಬಿಸಲಾಗುತ್ತದೆ. ಈ ಸೈದ್ಧಾಂತಿಕ ಕತ್ತರಿ ಮಧ್ಯೆ ಸಿಲುಕಿದ ಸಾಮಾನ್ಯ ಜನ ನೆಮ್ಮದಿಯ ಜೀವನ ನಡೆಸುವುದೇ ದುಸ್ತರವಾಗಿದೆ. ನೆರೆಹೊರೆಯವರ ನಡುವೆ, ಸ್ನೇಹಿತರ ಮಧ್ಯೆ, ಅಷ್ಟೇ ಏಕೆ ಕುಟುಂಬದ ಒಳಗೂ ರಾಜಕೀಯ ಸಿದ್ಧಾಂತಗಳು ಗೋಡೆಗಳನ್ನು ನಿರ್ಮಿಸುತ್ತಿವೆ.

ಇಂದಿನ ಮುಖ್ಯವಾಹಿನಿ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳು ಈ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತಿವೆ. ಸಾಮಾನ್ಯ ಜನರಿಗೆ ಬೇಕಿರುವುದು ಗುಣಮಟ್ಟದ ಶಿಕ್ಷಣ, ಕೈಗೆಟುಕುವ ಆರೋಗ್ಯ ಸೇವೆ, ಉದ್ಯೋಗ ಮತ್ತು ಉತ್ತಮ ರಸ್ತೆಗಳು. ಆದರೆ, ಬೆಳಗಿನಿಂದ ಸಂಜೆಯವರೆಗೆ ಮಾಧ್ಯಮಗಳಲ್ಲಿ ಬಿತ್ತರವಾಗುವುದು ಧರ್ಮ, ಜಾತಿ, ಇತಿಹಾಸದ ವಿವಾದಗಳು ಮತ್ತು ಸೈದ್ಧಾಂತಿಕ ಕೆಸರೆರಚಾಟಗಳು ಮಾತ್ರ. ನೈಜ ಸಮಸ್ಯೆಗಳ ಚರ್ಚೆಯಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಈ ಬಲ ಎಡಗಳ ವಿವಾದವನ್ನು ಒಂದು ಉಪಕರಣವಾಗಿ ಬಳಸಲಾಗುತ್ತಿದೆ ಎಂಬುದು ಸದ್ಯದ ಕಹಿ ಸತ್ಯ.

ಯಾವ ಸಿದ್ಧಾಂತವೂ ಹಸಿದ ಹೊಟ್ಟೆಗೆ ಅನ್ನ ನೀಡುವುದಿಲ್ಲ. ಬಲಪಂಥದ ಸಾಂಸ್ಕೃತಿಕ ಹೆಮ್ಮೆ ಅಥವಾ ಎಡಪಂಥದ ಕ್ರಾಂತಿಕಾರಿ ಭಾಷಣಗಳು ಸಾಮಾನ್ಯ ಜನರಿಗೆ ನೆಮ್ಮದಿಯ ಬದುಕನ್ನು ಗ್ಯಾರಂಟಿ ಮಾಡಲಾರವು. ಸಾಮಾನ್ಯ ಜನರಿಗೆ ಸಿದ್ಧಾಂತಗಳಿಗಿಂತ ಮುಖ್ಯವಾಗಿ ಬೇಕಿರುವುದು ಆರ್ಥಿಕ ಭದ್ರತೆಯಡಿ ಸ್ಥಿರವಾದ ಉದ್ಯೋಗ ಮತ್ತು ನ್ಯಾಯೋಚಿತ ಆದಾಯ. ಉತ್ತಮ ಶಿಕ್ಷಣ, ಗುಣಮಟ್ಟದ ವೈದ್ಯಕೀಯ ಸೌಲಭ್ಯಗಳೆಂಬ ಮೂಲಭೂತ ಸೌಕರ್ಯ. ಜಾತಿ, ಧರ್ಮ, ಸಿದ್ಧಾಂತಗಳ ಹೆಸರಿನಲ್ಲಿ ದ್ವೇಷವಿಲ್ಲದ ಸಾಮಾಜಿಕ ಜೀವನ.

ಬಲ ಮತ್ತು ಎಡಪಂಥಗಳ ವಿಚಾರಧಾರೆಗಳು ಪ್ರಜಾಪ್ರಭುತ್ವದ ವೈವಿಧ್ಯತೆಗೆ ಪೂರಕವಾಗಿರ ಬೇಕಿತ್ತೇ ಹೊರತು, ಸಮಾಜವನ್ನು ಒಡೆಯುವ ಕಟು ಅಸ್ತ್ರಗಳಾಗಬಾರದಿತ್ತು. ಸದ್ಯದ ಪರಿಸ್ಥಿತಿಯಲ್ಲಿ ಸಿದ್ಧಾಂತಗಳ ಅಂಧಾಭಿಮಾನದಿಂದ ಹೊರಬಂದು, ಸಾಮಾನ್ಯ ಜನರ ದಿನನಿತ್ಯದ ನೈಜ ಕಷ್ಟಗಳಿಗೆ ಕಿವಿಯಾಗುವ ತುರ್ತು ಅಗತ್ಯವಿದೆ.

ರಾಜಕಾರಣಿಗಳು ಮತ್ತು ಬುದ್ಧಿಜೀವಿಗಳು ತಮ್ಮ ಸೈದ್ಧಾಂತಿಕ ಹಿತಾಸಕ್ತಿಗಳನ್ನು ಬದಿಗಿಟ್ಟು, ಮಾನವೀಯತೆ ಮತ್ತು ಜನಕಲ್ಯಾಣವನ್ನೇ ಪರಮ ಸಿದ್ಧಾಂತವನ್ನಾಗಿ ಸ್ವೀಕರಿಸಿದಾಗ ಮಾತ್ರ ಸಾಮಾನ್ಯರ ಬದುಕು ನಲುಗುವುದರಿಂದ ತಪ್ಪಿಸಿಕೊಳ್ಳಲು ಸಾಧ್ಯ.

ಸಿದ್ಧಾಂತಗಳು ಮನುಷ್ಯನಿಗಾಗಿ ಇರಬೇಕೇ ಹೊರತು, ಮನುಷ್ಯ ಸಿದ್ಧಾಂತಗಳಿಗಾಗಿ ಅಲ್ಲ. ಇಂದಿನ ತೀವ್ರ ಧ್ರುವೀಕರಣಕ್ಕೆ ಮುಕ್ತಿ ಸಿಗಬೇಕಾದರೆ ಸಮಾಜದಲ್ಲಿ ಸಾಂವಿಧಾನಿಕ ದೇಶಪ್ರೇಮ ಹೆಚ್ಚಾಗಬೇಕು. ಯಾವುದೇ ಸಿದ್ಧಾಂತಕ್ಕಿಂತ ಸಂವಿಧಾನದ ಆಶಯಗಳಾದ ಸಮಾನತೆ, ಭ್ರಾತೃತ್ವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಆದ್ಯತೆ ನೀಡಬೇಕು.

ಸಾಮಾನ್ಯ ಜನರ ರಾಜಕೀಯ ಪಕ್ಷಗಳನ್ನು ಅವುಗಳ ಸಿದ್ಧಾಂತಗಳ ಆಧಾರದ ಮೇಲೆ ಅಳೆಯುವುದನ್ನು ನಿಲ್ಲಿಸಿ, ಮತ್ತು ನೀಡುವ ಆಡಳಿತ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗದ ಪ್ರಗತಿಯ ಆಧಾರದ ಮೇಲೆ ಪ್ರಶ್ನಿಸಲು ಆರಂಭಿಸಿದಾಗ ಮಾತ್ರ ಈ ಬಲ-ಎಡಗಳ ನಲುಗುವಿಕೆಯಿಂದ ಜನಸಾಮಾನ್ಯರು ಮುಕ್ತಿ ಪಡೆಯಲು ಸಾಧ್ಯ. ವೈಚಾರಿಕತೆ ಸಮಾಜವನ್ನು ಬೆಳಗಿಸುವ ದೀಪವಾಗಬೇಕು, ಸಮಾಜವನ್ನು ಸುಡುವ ಕಿಚ್ಚಾಗಬಾರದು.

ಒಂದು ದೇಶದ ನಿಜವಾದ ಪ್ರಗತಿ ಎಂದರೆ ಕೇವಲ ಜಿಡಿಪಿ ಅಂಕಿ-ಅಂಶಗಳ ಏರಿಕೆಯಲ್ಲ. ಬದಲಾಗಿ ನಾಗರಿಕರ ಜೀವನಮಟ್ಟದ ಸುಧಾರಣೆ, ಗುಣಮಟ್ಟದ ಶಿಕ್ಷಣ, ಕೈಗೆಟುಕುವ ಆರೋಗ್ಯ, ಆಧುನಿಕ ಮೂಲಸೌಕರ್ಯ ಮತ್ತು ಸಾಮಾಜಿಕ ಸಾಮರಸ್ಯವನ್ನು ಹೊಂದುವುದಾಗಿದೆ. ಆದರೆ, ಇಂದಿನ ಎಡ ಮತ್ತು ಬಲ ಬಣಗಳ ವಿಪರೀತ ಮನೋಭಾವನೆಯು ನಿಜವಾದ ಪ್ರಗತಿಯ ಹಾದಿಗೆ ಅಡ್ಡಗೋಡೆಯಾಗುತ್ತಿದೆ.

ಭಾರತವು ರಾಜ್ಯಗಳ ಒಕ್ಕೂಟ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೂ ದೇಶದ ಪ್ರಗತಿಗಾಗಿ ಜತೆಯಾಗಿ ಕೆಲಸ ಮಾಡಬೇಕು ಸಂವಿಧಾನವು ಸ್ಪಷ್ಟವಾದ ಚೌಕಟ್ಟನ್ನು ನಿರ್ಮಿಸಿದೆ.

ಇಂದು ಕೇಂದ್ರದಲ್ಲಿ ಒಂದು ಸಿದ್ಧಾಂತದ ಪಕ್ಷ ಮತ್ತು ರಾಜ್ಯದಲ್ಲಿ ಮತ್ತೊಂದು ಸಿದ್ಧಾಂತದ ಪಕ್ಷ ಅಧಿಕಾರದಲ್ಲಿದ್ದರೆ, ಅವರ ನಡುವೆ ಆರೋಗ್ಯಕರ ಸ್ಪರ್ಧೆ ಇರುವ ಬದಲಿಗೆ ರಾಜಕೀಯ ಸೈದ್ಧಾಂತಿಕ ಯುದ್ಧವೇ ನಡೆಯುತ್ತಿದೆ. ಗವರ್ನರ್ ಹುದ್ದೆಯ ದುರ್ಬಳಕೆ, ಬರಗಾಲ ಅಥವಾ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಅನುದಾನ ಹಂಚಿಕೆಯಲ್ಲಿ ತಾರತಮ್ಯ, ಮತ್ತು ಕೇಂದ್ರ ತನಿಖಾ ಸಂಸ್ಥೆಗಳನ್ನು ರಾಜ್ಯಗಳ ಮೇಲೆ ರಾಜಕೀಯ ದಾಳವಾಗಿ ಬಳಸುವಿಕೆ ಇವೆಲ್ಲವೂ ಸಂವಿಧಾನ ರೂಪಿಸಿದ ಒಕ್ಕೂಟ ವ್ಯವಸ್ಥೆಯ ಚೌಕಟ್ಟನ್ನು ಧೂಳಿಪಟ ಮಾಡುತ್ತಿವೆ.

ಸೈದ್ಧಾಂತಿಕ ಭಾಷಣಗಳು ಮತ್ತು ವಿವಾದಗಳ ಚರ್ಚೆಯಲ್ಲಿ ಮುಳುಗಿರುವ ಯುವಕರು, ತಮ್ಮ ವೃತ್ತಿ ಜೀವನ ಕಟ್ಟಿಕೊಳ್ಳಲು ಬೇಕಾದ ತಾಂತ್ರಿಕ ಜ್ಞಾನ ಮತ್ತು ಉದ್ಯಮಶೀಲತೆಯ ಕಡೆಗೆ ಗಮನ ಹರಿಸುತ್ತಿಲ್ಲ, ರಾಜಕೀಯ ಪಕ್ಷಗಳು ಇವರನ್ನು ಕೇವಲ ತಮ್ಮ ರ‍್ಯಾಲಿಗಳಿಗೆ, ಐಟಿ ಸೆಲ್‌ಗಳಿಗೆ, ವೋಟ್‌ಬ್ಯಾಂಕ್‌ಗಾಗಿ ಬಳಸಿಕೊಳ್ಳುತ್ತಿವೆ.

ಇಂದಿನ ಯುವಕರು ತಮ್ಮ ತಂತ್ರಜ್ಞಾನವನ್ನು, ಕೌಶಲವನ್ನು ದೇಶದ ಪ್ರಗತಿಗೆ ಬಳಸುವುದರ ಬದಲಾಗಿ, ಜಾಲತಾಣಗಳಲ್ಲಿ ತಮ್ಮ ಸಿದ್ಧಾಂತವನ್ನು ಸಮರ್ಥಿಸಲು ಎದುರಾಳಿ ಪಂಥವನ್ನು ಟ್ರೋಲ್ ಮಾಡಲು ಬಳಸುತ್ತಿದ್ದಾರೆ. ಇದರಿಂದ ಯುವಕರಲ್ಲಿ ಸಕಾರಾತ್ಮಕ ಆಲೋಚನೆಗಳು ಕಡಿಮೆಯಾಗಿ, ಸದಾ ಆಕ್ರೋಶ, ನಕಾರಾತ್ಮಕತೆ ಮತ್ತು ಮಾನಸಿಕ ಒತ್ತಡ ಹೆಚ್ಚಾಗುತ್ತಿದೆ.

ಎಡ ಅಥವಾ ಬಲಪಂಥೀಯ ಸಿದ್ಧಾಂತಗಳು ಕೇವಲ ಐದು-ಹತ್ತು ವರ್ಷಗಳ ಅಧಿಕಾರದ ಅವಧಿಯನ್ನು ಹೊಂದಿರಬಹುದು. ಆದರೆ, ಸಂವಿಧಾನ ಸಾಮಾಜಿಕ ನ್ಯಾಯ ಒದಗಿಸುತ್ತದೆ. ದೇಶದ ನೈಜ ಪ್ರಗತಿಯಾಗಬೇಕಾದರೆ, ಸಿದ್ಧಾಂತಗಳ ಅತಿರೇಕವನ್ನು ಬದಿಗಿಟ್ಟು, ಸಾಂವಿಧಾನಿಕ ಚೌಕಟ್ಟಿನ ಮಿತಿಯೊಳಗೆ ಬದುಕುವುದನ್ನು ಕಲಿಯುವುದೇ ಇಂದಿನ ಭಾರತದ ಮುಂದಿರುವ ಅತಿ ದೊಡ್ಡ ಜವಾಬ್ದಾರಿ.

ಪ್ರಕೃತಿಗೆ ಯಾವ ಪಂಥಗಳೂ ಇಲ್ಲ. ಬೆಳಗುವ ಸೂರ್ಯನಿಗೆ, ಹರಿಯುವ ನದಿಗೆ, ಕಷ್ಟದಲ್ಲಿ ಜತೆಯಾಗುವ ನೆರೆಹೊರೆಯವರಿಗೆ ಎಡ ಬಲಗಳ ಭೇದವಿಲ್ಲ. ಹಸಿದ ಹೊಟ್ಟೆಗೆ ಅನ್ನ, ತುತ್ತು ನೀಡುವ ಕೈಗೆ ಯಾವ ಸಿದ್ಧಾಂತದ ಬಣವೂ ಇರುವುದಿಲ್ಲ. ರಾಜಕೀಯದ ಚದುರಂಗದಾಟದಲ್ಲಿ ಎಡ-ಬಲಗಳು ಅವರವರ ಬೇಳೆ ಬೇಯಿಸಿಕೊಳ್ಳುವ ದಾಳಗಳಷ್ಟೇ. ನಾವು ಕೇವಲ ಮನುಷ್ಯರಾಗಿ ಬದುಕಬೇಕಿದೆ. ಸಿದ್ಧಾಂತಗಳ ಅಂಧತ್ವವನ್ನು ಕಳಚಿ ಬದುಕಬೇಕಿದೆ. ಕೊನೆಯದಾಗಿ ಯುದ್ಧಗಳು ಮತ್ತು ಸಿದ್ಧಾಂತಗಳ ನಡುವೆ ಗೆದ್ದವರು ಯಾರೂ ಇಲ್ಲ; ಸೋತದ್ದು ಮತ್ತು ಸತ್ತದ್ದು ಕೇವಲ ರಕ್ತಮಾಂಸಗಳ ಮನುಷ್ಯ ಮಾತ್ರ.

**- ಸುರೇಂದ್ರ ಪೈ,** ಭಟ್ಕಳ

# ಬಾಟಲಿ ಸಂಗ್ರಹ ಹವ್ಯಾಸ



> ಒಂದು ವೇಳೆ ಪೋಷಕರು ಸಂಪೂರ್ಣ ಬಾಟಲಿಗಳನ್ನು ಮನೆಯಲ್ಲಿ ಇಡುವುದಕ್ಕೆ ಅವಕಾಶ ನೀಡದಿದ್ದರೆ, ಭಾಗಶಃ ಪರಿಹಾರಕ್ಕೆ ಪ್ರಯತ್ನಿಸಿ. ಪ್ರತಿ ಬಾಟಲಿಯಿಂದ ಅದರ ಸುಂದರವಾದ ಲೇಬಲ್ ಅನ್ನು ಎಚ್ಚರಿಕೆಯಿಂದ ತೆಗೆದು, ಅದನ್ನು ಒಂದು ಆಲ್ಬಮ್‌ನಲ್ಲಿ ಸಂಗ್ರಹಿಸಿ. ಆಗ ಬಾಟಲಿಗಳನ್ನು ಒಡೆದರೂ, ನಿಮ್ಮ ಸಂಗ್ರಹದ ಕಲಾತ್ಮಕ ಭಾಗ ಉಳಿಯುತ್ತದೆ.

ಸಂಪಾದಕರ ಸದ್ಯಶೋಧನೆ

ನನಗೆ ಮದ್ಯದ (ಲಿಕ್ಕರ್) ಬಾಟಲಿಗಳನ್ನು ಸಂಗ್ರಹಿಸುವ ಹವ್ಯಾಸ. ಆದರೆ ನನಗೆ ಕುಡಿಯುವ ಅಭ್ಯಾಸ ಇಲ್ಲವೇ ಇಲ್ಲ. ನನ್ನ ತಂದೆ-ತಾಯಿಗೆ ನನ್ನ ಈ ಹವ್ಯಾಸದ ಬಗ್ಗೆ ಸ್ವಲ್ಪವೂ ಗೌರವವಿಲ್ಲ. ನಾನು ಹಾಸ್ಟೆಲ್‌ನಲ್ಲಿದ್ದಾಗ, ಕೆಲವು ಬಾಟಲಿಗಳನ್ನು ಸಂಗ್ರಹಿಸಿದ್ದೆ. ನಂತರ ಅವನ್ನು ಮನೆಗೆ ತಂದಾಗ ನನ್ನ ತಂದೆಯವರು ಅವನ್ನೆಲ್ಲ ಒಡೆದು ಹಾಕುತ್ತೇನೆ ಎಂದು ಗದರಿದರು.

ನಾನು ಅವರಿಗೆ ಏನೇ ಹೇಳಿದರೂ ಅವರು ಒಪ್ಪುತ್ತಿಲ್ಲ. ಆದರೆ ನನಗೆ ಆ ಬಾಟಲಿಗಳನ್ನು ಕೊಡುವ ಮನಸ್ಸಿಲ್ಲ. ಮನೆಯಲ್ಲಿ ಪ್ರದರ್ಶಿಸಲು ಬಿಡುತ್ತಿಲ್ಲ. ನಾನು ಏನು ಮಾಡಲಿ? ಎಂದು ಓದುಗರೊಬ್ಬರು ಪ್ರಶ್ನೆ ಕೇಳಿದ್ದರು. ಅದಕ್ಕೆ ನಾನು ಬರೆದ ಉತ್ತರ - ನಿಮ್ಮ ಈ ಪರಿಸ್ಥಿತಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ.

ಕುಡಿಯುವ ಅಭ್ಯಾಸ ಇಲ್ಲದಿದ್ದರೂ ಮದ್ಯದ ಬಾಟಲಿಗಳನ್ನು ಸಂಗ್ರಹಿಸುವ ನಿಮ್ಮ ಹವ್ಯಾಸವು ವಿಶಿಷ್ಟವಾಗಿದೆ. ಅದು ನಿಮ್ಮ ವೈಯಕ್ತಿಕ ಆಸಕ್ತಿ. ಆದರೆ, ಇದು ನಿಮ್ಮ ಪೋಷಕರಿಗೆ ಗೊಂದಲ ಮತ್ತು ಅಸಮಾಧಾನವನ್ನು ಉಂಟುಮಾಡಿರುವುದು ಸಹಜ. ನಿಮ್ಮ ಹವ್ಯಾಸವನ್ನು ಉಳಿಸಿ ಕೊಳ್ಳಲು ಮತ್ತು ಮನೆಯಲ್ಲಿ ಶಾಂತಿಯನ್ನು ಕಾಪಾಡಿಕೊಳ್ಳಲು ಕೆಲವು ಮಾರ್ಗೋಪಾಯಗಳನ್ನು ಸೂಚಿಸಬಹುದು.

ಪೋಷಕರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಿ. ಪೋಷಕರು ನಿಮ್ಮ ಹವ್ಯಾಸವನ್ನು ಗೌರವಿಸದಿರಲು ಈ ಕಾರಣಗಳು ಇರಬಹುದು. ಭಾರತೀಯ ಸಮಾಜದಲ್ಲಿ ಮದ್ಯ ಮತ್ತು ಮದ್ಯದ ಬಾಟಲಿಗಳು ನಕಾರಾತ್ಮಕ ವಿಚಾರಗಳೊಂದಿಗೆ ಸಂಬಂಧ ಹೊಂದಿವೆ. ಇದನ್ನು ಮನೆಯಲ್ಲಿ ಇಡುವುದು ಅವರ ಸಾಮಾಜಿಕ ಪ್ರತಿಷ್ಠೆಗೆ ಧಕ್ಕೆಯಾಗಬಹುದು ಎಂದು ಅವರು ಭಾವಿಸಿರಬಹುದು.

ನೀವು ಕುಡಿಯುವುದಿಲ್ಲ ಎಂದು ಹೇಳಿದರೂ, ಸಂಗ್ರಹಣೆಯ ಮೂಲಕ ನಿಮಗೆ ಮದ್ಯದ ಬಗ್ಗೆ ಆಸಕ್ತಿ ಬೆಳೆಯಬಹುದು ಅಥವಾ ನೀವು ರಹಸ್ಯವಾಗಿ ಕುಡಿಯುತ್ತಿರಬಹುದು ಎಂಬ ಭಯ ಅವರಿಗೆ ಇರಬಹುದು. ಇದು ಅಸಹಜ ಅಥವಾ ಅಸಾಂಪ್ರದಾಯಿಕ ಹವ್ಯಾಸ ಎಂದು ಅವರು ಭಾವಿಸಿರಬಹುದು. ಈ ಸಮಸ್ಯೆಗೆ ನೇರ ಸಂಘರ್ಷದ ಬದಲು, ಹೊಂದಾಣಿಕೆಯ ಮಾರ್ಗವನ್ನು ಅನುಸರಿಸುವುದು ಉತ್ತಮ. ತಾತ್ಕಾಲಿಕವಾಗಿ ಬಾಟಲಿಗಳನ್ನು ಬೇರೆಡೆ ಇಡಿ.

ನಿಮ್ಮ ಪೋಷಕರ ಆಜ್ಞೆ ಮತ್ತು ಕೋಪವನ್ನು ಶಾಂತಗೊಳಿಸಲು ಇದು ಅತ್ಯುತ್ತಮ ಮಾರ್ಗ. ಬಾಟಲಿಗಳನ್ನು ತಾತ್ಕಾಲಿಕವಾಗಿ ಮನೆಯಲ್ಲಿ ಎಲ್ಲರಿಗೂ ಕಾಣದ ಸ್ಥಳದಲ್ಲಿ (ಉದಾಹರಣೆಗೆ, ನಿಮ್ಮ ಕ್ಲೋಸೆಟ್‌ನ ಹಿಂಭಾಗದ ಕಪಾಟು, ಹಾಸಿಗೆಯ ಕೆಳಗಿನ ಡ್ರಾಯರ್‌ಗಳು ಅಥವಾ ಬೀಗ ಹಾಕಿದ ಪೆಟ್ಟಿಗೆಯಲ್ಲಿ) ಸುರಕ್ಷಿತವಾಗಿ ಇರಿಸಿ. ಒಂದು ವೇಳೆ ಮನೆಯಲ್ಲಿ ಇಡುವುದಕ್ಕೆ ಸಾಧ್ಯವಾಗದಿದ್ದರೆ, ವಿಶ್ವಾಸಾರ್ಹ ಸ್ನೇಹಿತರ ಮನೆಯಲ್ಲಿ ಇಡಬಹುದು.

ಇದು ನಿಮ್ಮ ಸಂಗ್ರಹಕ್ಕೆ ಸಂಪೂರ್ಣ ಸುರಕ್ಷತೆಯನ್ನು ನೀಡುತ್ತದೆ. ಕೋಪ ತಣ್ಣಗಾದ ಮೇಲೆ, ಒಂದೆರಡು ದಿನಗಳ ನಂತರ, ನಿಮ್ಮ ಪೋಷಕರೊಂದಿಗೆ ಶಾಂತವಾಗಿ ಮಾತನಾಡಿ, ನಿಮ್ಮ ಉದ್ದೇಶವನ್ನು ಸ್ಪಷ್ಟಪಡಿಸಿ.

ಇದು ಕೇವಲ ಮದ್ಯದ ಬಾಟಲಿಯಲ್ಲ, ಆದರೆ ಇದರ ವಿಶಿಷ್ಟ ವಿನ್ಯಾಸ, ಅದರ ಲೇಬಲ್‌ನ ಕಲೆ ಅಥವಾ ಅದು ಪ್ರತಿನಿಧಿಸುವ ಒಂದು ನಿರ್ದಿಷ್ಟ ಕಥೆಗಾಗಿ ನಾನು ಇವನ್ನು ಸಂಗ್ರಹಿಸುತ್ತಿದ್ದೇನೆ. ಇದು ನನಗೆ ಸ್ಟ್ಯಾಂಪ್ ಸಂಗ್ರಹಣೆ, ಅಥವಾ ನಾಣ್ಯಗಳ ಸಂಗ್ರಹದಂತೆ ಒಂದು ಹವ್ಯಾಸ ಎಂದು ವಿವರಿಸಿ.

ನಾನು ಎಂದಿಗೂ ಕುಡಿಯುವುದಿಲ್ಲ ಎಂದು ಪ್ರಮಾಣ ಮಾಡುತ್ತೇನೆ. ಒಂದು ವೇಳೆ ನಾನು ಕುಡಿಯುವುದನ್ನು ನೀವು ನೋಡಿದರೆ, ಈ ಎಲ್ಲ ಬಾಟಲಿಗಳನ್ನು ಒಡೆದು ಹಾಕಬಹುದು. ಇದು ಕೇವಲ ಒಂದು ಹವ್ಯಾಸದ ಸಂಗ್ರಹ, ಕೆಟ್ಟ ಅಭ್ಯಾಸವಲ್ಲ ಎಂದು ಖಚಿತಪಡಿಸಿ. ನನಗೆ 28 ವರ್ಷವಾಗಿದೆ ಮತ್ತು ನನ್ನ ಆಸಕ್ತಿಗಳು ಹಾಗೂ ಮಿತಿಗಳ ಬಗ್ಗೆ ನನಗೆ ಅರಿವಿದೆ. ಈ ವಿಷಯದಲ್ಲಿ ನನ್ನ ಮೇಲೆ ನಂಬಿಕೆ ಇಡಿ ಎಂದು ಪ್ರಬುದ್ಧತೆಯಿಂದ ಮಾತನಾಡಿ.

ಒಂದು ವೇಳೆ ಪೋಷಕರು ಸಂಪೂರ್ಣ ಬಾಟಲಿಗಳನ್ನು ಮನೆಯಲ್ಲಿ ಇಡುವುದಕ್ಕೆ ಅವಕಾಶ ನೀಡದಿದ್ದರೆ, ಭಾಗಶಃ ಪರಿಹಾರಕ್ಕೆ ಪ್ರಯತ್ನಿಸಿ. ಪ್ರತಿ ಬಾಟಲಿಯಿಂದ ಅದರ ಸುಂದರವಾದ ಲೇಬಲ್ ಅನ್ನು ಎಚ್ಚರಿಕೆಯಿಂದ ತೆಗೆದು, ಅದನ್ನು ಒಂದು ಆಲ್ಬಮ್‌ನಲ್ಲಿ ಸಂಗ್ರಹಿಸಿ. ಆಗ ಬಾಟಲಿಗಳನ್ನು ಒಡೆದರೂ, ನಿಮ್ಮ ಸಂಗ್ರಹದ ಕಲಾತ್ಮಕ ಭಾಗ ಉಳಿಯುತ್ತದೆ.

ನೀವು ಪ್ರದರ್ಶಿಸಲು ಬಯಸಿದರೆ, ಅತ್ಯಂತ ವಿಶಿಷ್ಟವಾದ ಒಂದು ಅಥವಾ ಎರಡು ಬಾಟಲಿಗಳನ್ನು ಮಾತ್ರ ತೆಗೆದುಕೊಂಡು, ಅದನ್ನು ಮದ್ಯದ ಬಾಟಲಿ ಎಂದು ಗೊತ್ತಾಗದ ರೀತಿಯಲ್ಲಿ ಅಲಂಕಾರಿಕ ವಸ್ತುಗಳ ನಡುವೆ ಇರಿಸಿ. ನೆನಪಿಡಿ, ಹಿರಿಯರ ಮನವೊಲಿಸಲು ಸಮಯ ಬೇಕಾಗುತ್ತದೆ.

**- ವಿಶ್ವೇಶ್ವರ ಭಟ್**

# ಕರ್ನಾಟಕದ ಚಿರಾಪುಂಜಿ - ಆಗುಂಬೆ

ಆಗುಂಬೆ ಕರ್ನಾಟಕದ ಅತ್ಯಂತ ಸುಂದರವಾದ ಹಾಗೂ ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ. ಇದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಪಶ್ಚಿಮ ಘಟ್ಟಗಳ ಮಧ್ಯೆ ನೆಲೆಗೊಂಡಿದೆ. ಸಮುದ್ರ ಮಟ್ಟದಿಂದ ಸುಮಾರು 830 ಮೀಟರ್ ಎತ್ತರದಲ್ಲಿರುವ ಆಗುಂಬೆಯು ತನ್ನ ಹಚ್ಚ ಹಸಿರಿನ ಕಾಡುಗಳು, ಮಂಜಿನಿಂದ ಆವೃತವಾದ ಬೆಟ್ಟಗಳು, ಜಲಪಾತಗಳು ಹಾಗೂ ಹೆಚ್ಚಿನ ಮಳೆಯ ಕಾರಣದಿಂದ ಪ್ರಸಿದ್ಧವಾಗಿದೆ. ಕರ್ನಾಟಕದ ಚಿರಾಪುಂಜಿ ಎಂಬ ಹೆಸರಿನಿಂದಲೂ ಆಗುಂಬೆ ಖ್ಯಾತಿ ಪಡೆದಿದೆ.

ಆಗುಂಬೆಯು ಪ್ರಕೃತಿಯ ಸೊಬಗನ್ನು ಮೈಗೂಡಿಸಿಕೊಂಡಿರುವ ತಾಣವಾಗಿದ್ದು, ವರ್ಷಪೂರ್ತಿ ಸಾವಿರಾರು ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತದೆ. ಮಳೆಗಾಲದಲ್ಲಿ ಈ ಪ್ರದೇಶವು ಸಂಪೂರ್ಣ ಹಸಿರು ಹೊದಿಕೆಯನ್ನು ಧರಿಸಿ ಸ್ವರ್ಗದಂತೆಯೇ ಕಾಣುತ್ತದೆ.

**ಭೌಗೋಳಿಕ ಮಹತ್ವ:** ಆಗುಂಬೆಯು ಪಶ್ಚಿಮ ಘಟ್ಟಗಳ ಪ್ರಮುಖ ಭಾಗವಾಗಿದ್ದು, ವಿಶ್ವ ಪರಂಪರೆಯ ತಾಣಗಳ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಪಶ್ಚಿಮ ಘಟ್ಟಗಳ ಜೀವ ವೈವಿಧ್ಯತೆಯ ಒಂದು ಪ್ರಮುಖ ಕೇಂದ್ರವಾಗಿದೆ. ಇಲ್ಲಿ ದಟ್ಟವಾದ ಮಳೆಕಾಡುಗಳು, ಅಪರೂಪದ ಸಸ್ಯಗಳು ಹಾಗೂ ವಿವಿಧ ಪ್ರಾಣಿ-ಪಕ್ಷಿಗಳು ಕಂಡುಬರುತ್ತವೆ. ವರ್ಷಕ್ಕೆ ಸುಮಾರು 7,000 ದಿಂದ 8,000 ಮಿಲಿಮೀಟರ್‌ಗಳಷ್ಟು ಮಳೆಯಾಗುವುದರಿಂದ ಇದು ಭಾರತದ ಅತ್ಯಧಿಕ ಮಳೆಯಾಗುವ ಪ್ರದೇಶಗಳಲ್ಲಿ ಒಂದಾಗಿದೆ.

**ಆಗುಂಬೆ.**

**ಪ್ರಮುಖ ಪ್ರವಾಸಿ ಆಕರ್ಷಣೆಗಳು..:**

**1. ಆಗುಂಬೆ ಸೂರ್ಯಾಸ್ತದ ವ್ಯೂ ಪಾಯಿಂಟ್:** ಆಗುಂಬೆಯ ಪ್ರಮುಖ ಆಕರ್ಷಣೆಯಾದ ಈ ಸ್ಥಳದಿಂದ ಅರಬ್ಬೀ ಸಮುದ್ರದ ದಿಕ್ಕಿನಲ್ಲಿ ಸೂರ್ಯಾಸ್ತದ ಅದ್ಭುತ ದೃಶ್ಯವನ್ನು ವೀಕ್ಷಿಸಬಹುದು. ಸಂಜೆ ವೇಳೆಯಲ್ಲಿ ಸಾವಿರಾರು ಪ್ರವಾಸಿಗರು ಇಲ್ಲಿ ಸೇರುತ್ತಾರೆ.

**2. ಬರ್ಕಾನ ಜಲಪಾತ:** ಸುಮಾರು 850 ಅಡಿ ಎತ್ತರದಿಂದ ಧುಮ್ಮಿಕ್ಕುವ ಈ ಜಲಪಾತವು ಕರ್ನಾಟಕದ ಅತಿ ಎತ್ತರದ ಜಲಪಾತಗಳಲ್ಲಿ ಒಂದಾಗಿದೆ. ಮಳೆಗಾಲದಲ್ಲಿ ಇದರ ಸೌಂದರ್ಯ ಇನ್ನಷ್ಟು ಹೆಚ್ಚಾಗುತ್ತದೆ.

**3. ಒನಕೆ ಅಬ್ಬಿ ಜಲಪಾತ:** ದಟ್ಟ ಕಾಡಿನ ಮಧ್ಯೆ ಇರುವ ಈ ಜಲಪಾತವನ್ನು ತಲುಪಲು ಚಾರಣ ಮಾಡಬೇಕು. ಪ್ರಕೃತಿ ಪ್ರಿಯರಿಗೆ ಇದು ವಿಶೇಷ ಆಕರ್ಷಣೆಯಾಗಿದೆ.

**4. ಕುಂಚಿಕಲ್ ಜಲಪಾತ:** ಭಾರತದ ಅತಿ ಎತ್ತರದ ಜಲಪಾತಗಳಲ್ಲಿ ಒಂದಾದ ಕುಂಚಿಕಲ್ ಜಲಪಾತವು ಆಗುಂಬೆಯ ಸಮೀಪದಲ್ಲಿದೆ.

**5. ಆಗುಂಬೆ ಮಳೆಕಾಡು ಸಂಶೋಧನಾ ಕೇಂದ್ರ:** ಇದು ಮಳೆಕಾಡುಗಳ ಸಂಶೋಧನಾ ಕೇಂದ್ರವಾಗಿದ್ದು, ವಿಶೇಷವಾಗಿ ಕಿಂಗ್ ಕೋಬ್ರಾ ಹಾವುಗಳ ಅಧ್ಯಯನಕ್ಕಾಗಿ ವಿಶ್ವದಾದ್ಯಂತ ಪ್ರಸಿದ್ಧವಾಗಿದೆ.

**ಜೀವ ವೈವಿಧ್ಯತೆ:** ಆಗುಂಬೆಯ ಕಾಡುಗಳಲ್ಲಿ ಹಲವಾರು ಅಪರೂಪದ ಪ್ರಾಣಿ-ಪಕ್ಷಿಗಳು ಕಂಡುಬರುತ್ತವೆ. King Cobra, ಮಲಬಾರ್ ದೈತ್ಯ ಅಳಿಲು, ವಿವಿಧ ಜಾತಿಯ ಚಿಟ್ಟೆಗಳು ಹಾಗೂ ಪಕ್ಷಿಗಳು ಇಲ್ಲಿ ಕಂಡುಬರುತ್ತವೆ. ಆದ್ದರಿಂದ ಆಗುಂಬೆಯು ಪರಿಸರ ಅಧ್ಯಯನಕಾರರು ಮತ್ತು ವನ್ಯಜೀವಿ ಪ್ರಿಯರಿಗೆ ಅತ್ಯಂತ ಮಹತ್ವದ ತಾಣವಾಗಿದೆ.

**ಮಾಲ್ಗುಡಿ.**

**ಸಂಸ್ಕೃತಿ ಮತ್ತು ಖ್ಯಾತಿ:** ಜನಪ್ರಿಯ ಕನ್ನಡ ದೂರದರ್ಶನ ಧಾರಾವಾಹಿ Malgudi Daysಯ ಹಲವಾರು ಭಾಗಗಳ ಚಿತ್ರೀಕರಣ ಆಗುಂಬೆಯಲ್ಲಿ ನಡೆದ ಕಾರಣ ಈ ಊರು ಇನ್ನಷ್ಟು ಪ್ರಸಿದ್ಧಿಯಾಯಿತು. ಇದರ ನೈಸರ್ಗಿಕ ಸೌಂದರ್ಯವು ಚಲನಚಿತ್ರ ನಿರ್ಮಾಪಕರನ್ನೂ ಆಕರ್ಷಿಸಿದೆ.

**ಭೇಟಿ ನೀಡಲು ಸೂಕ್ತ ಸಮಯ:** ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಮಳೆಗಾಲದಲ್ಲಿ ಆಗುಂಬೆಯ ಸೌಂದರ್ಯ ಅತ್ಯುನ್ನತ ಮಟ್ಟದಲ್ಲಿರುತ್ತದೆ. ಆದರೆ ಭಾರೀ ಮಳೆಯ ಕಾರಣದಿಂದ ಕೆಲವೊಮ್ಮೆ ಸಂಚಾರಕ್ಕೆ ತೊಂದರೆ ಉಂಟಾಗಬಹುದು. ಅಕ್ಟೋಬರ್‌ನಿಂದ ಫೆಬ್ರವರಿವರೆಗೆ ಪ್ರವಾಸಕ್ಕೆ ಅತ್ಯಂತ ಸೂಕ್ತ ಸಮಯವಾಗಿದೆ.

ಆಗುಂಬೆಯಲ್ಲಿ ರಾತ್ರಿಯ ಪ್ರಯಾಣ.... ಆಗುಂಬೆಯು ಕರ್ನಾಟಕದ ನೈಸರ್ಗಿಕ ಸಂಪತ್ತಿನ ಅಮೂಲ್ಯ ರತ್ನವಾಗಿದೆ. ದಟ್ಟ ಮಳೆಕಾಡುಗಳು, ಭವ್ಯ ಜಲಪಾತಗಳು, ವೈವಿಧ್ಯಮಯ ಜೀವಜಗತ್ತು, ಅದ್ಭುತ ಸೂರ್ಯಾಸ್ತದ ದೃಶ್ಯಗಳು ಹಾಗೂ ಶಾಂತ ವಾತಾವರಣವು ಆಗುಂಬೆಯನ್ನು ಪ್ರವಾಸಿಗರ ನೆಚ್ಚಿನ ತಾಣವನ್ನಾಗಿ ಮಾಡಿವೆ. ಪ್ರಕೃತಿಯ ಮಡಿಲಲ್ಲಿ ವಿಶ್ರಾಂತಿ ಪಡೆಯಲು, ಸಾಹಸ ಚಾರಣ ಮಾಡಲು ಹಾಗೂ ಪರಿಸರದ ಸೌಂದರ್ಯವನ್ನು ಅನುಭವಿಸಲು ಆಗುಂಬೆಯು ಅತ್ಯುತ್ತಮ ಸ್ಥಳವಾಗಿದೆ.

**- ರಮೇಶ ನಾಯ್ಕ,** ಉಪ್ಪುಂದ, ಬೈಂದೂರು



## ವಿದ್ಯಾರ್ಥಿನಿಯರ ಹಾಸ್ಟೆಲ್ ಕಟ್ಟಡ ಉದ್ಘಾಟಿಸಿದ ಶಾಸಕ ಹೆಚ್.ಡಿ.ರೇವಣ್ಣ

# ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಿ

• ಪ್ರಜೋದಯ ವರದಿ

**ಹಾಸನ:** ಗ್ರಾಮೀಣ ಪ್ರದೇಶದ ಬಡಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುವುದರಿಂದ ಮಕ್ಕಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿ ಆಗುತ್ತದೆ ಎಂದು ಶಾಸಕ ಹೆಚ್.ಡಿ.ರೇವಣ್ಣ ಅವರು ತಿಳಿಸಿದ್ದಾರೆ.

ಮೊಸಳೆ ಹೊಸಹಳ್ಳಿಯಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿನಿಯರಿಗೆ ನೂತನವಾಗಿ ನಿರ್ಮಿಸಿರುವ ಹಾಸ್ಟೆಲ್ ಕಟ್ಟಡವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ಕಾಲೇಜುಗಳಲ್ಲಿ ಖಾಸಗಿ ಕಾಲೇಜುಗಳಿಗಿಂತ ಉತ್ತಮ ಶಿಕ್ಷಣ ಒದಗಿಸಲು ಮುತುವರ್ಜಿ ವಹಿಸಬೇಕು ಎಂದು ತಿಳಿಸಿದರು.

ಮೊಸಳೆ ಹೊಸಹಳ್ಳಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ 1445 ಮಕ್ಕಳು ಮತ್ತು ಪಾಲಿಟೆಕ್ನಿಕ್ ಕಾಲೇಜಿನಲ್ಲಿ 450 ಮಕ್ಕಳು ಓದುತ್ತಿದ್ದಾರೆ, ವಿದ್ಯೆ ಇಂದು ಮಾರಾಟದ ವಸ್ತುವಾಗಿದೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಪ್ರವೇಶಕ್ಕೆ ರೂ. 40,000 ಶುಲ್ಕ ಪಾಲಿಟೆಕ್ನಿಕ್ ಪ್ರವೇಶಕ್ಕೆ 4800 ರೂ ಶುಲ್ಕವಿದೆ. ಬಡಜನತೆ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅನುಕೂಲವಾಗುತ್ತದೆ ಎಂದರು.



ಹೆಣ್ಣು ಮಕ್ಕಳು ಚೆನ್ನಾಗಿ ಓದಿ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು. ಮಕ್ಕಳ ವಿದ್ಯಾಭ್ಯಾಸಕ್ಕೆ ಮೂಲಭೂತ ಸೌಕರ್ಯಗಳು ಬಹು ಮುಖ್ಯ, ಈ ನಿಟ್ಟಿನಲ್ಲಿ ಮುಖ್ಯ ರಸ್ತೆಯಿಂದ ಕಾಲೇಜಿಗೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು ಎಂದರಲ್ಲದೆ, ವಿದ್ಯಾರ್ಥಿಗಳ ಕ್ರೀಡಾ ಚಟುವಟಿಕೆಗಳಿಗೆ ಅನುಕೂಲ ವಾಗುವಂತೆ 15 ರಿಂದ 20 ಕೋಟಿ ರೂ. ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಚಿಂತನೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ರಂಗಸ್ವಾಮಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಮೊಸಳೆ ಹೊಸಹಳ್ಳಿಯಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು 2019 ರಲ್ಲಿ ಐದು ಕೋರ್ಸ್‌ಗಳೊಂದಿಗೆ ಪ್ರಾರಂಭವಾಗಿದ್ದು, ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ. ಈ ಬಾರಿ ಹೊಸದಾಗಿ ಎ.ಐ. ಮತ್ತು ಡೇಟಾಬೇಸ್ ಕೋರ್ಸ್‌ಗಳು ಹಾಗೂ ಸಿವಿಲ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಎಂ.ಟೆಕ್ ಕೋರ್ಸ್‌ಗಳು ಪ್ರಾರಂಭವಾಗಿವೆ ಎಂದು ಅವರು ಹೇಳಿದರು.

ಭಾರತ ಎಲೆಕ್ಟ್ರಾನಿಕ್ಸ್ ಕಂಪೆನಿಯವರು ನಡೆಸಿದ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ಸದರಿ ಕಾಲೇಜಿನ 8 ವಿದ್ಯಾರ್ಥಿಗಳು ಆಯ್ಕೆಯಾಗಿರುವುದು ಈ ಕಾಲೇಜಿಗೆ ಮತ್ತೊಂದು ಹೆಮ್ಮೆ ವಿಷಯ ಎಂದು ಅವರು ಸಂತಸ ವ್ಯಕ್ತಪಡಿಸಿದರು.

ರಾಜ್ಯದ 16 ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ಗಳಲ್ಲಿ ಅತ್ಯಂತ ಹೆಚ್ಚು ವಿದ್ಯಾರ್ಥಿಗಳು ಪ್ರವೇಶ ಪಡೆದಿರುವ ಕಾಲೇಜು ಎಂಬ ಹೆಗ್ಗಳಿಕೆಗೆ ಈ ಕಾಲೇಜು ಪಾತ್ರವಾಗಿದೆ ಮುಂದೊಂದು ದಿನ ರಾಜ್ಯದ ಮೊದಲ 10 ಕಾಲೇಜುಗಳಲ್ಲಿ ಮೊಸಳೆ ಹೊಸಹಳ್ಳಿ ಕಾಲೇಜು ಸ್ಥಾನ ಪಡೆಯುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ತಿಳಿಸಿದರು.

ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲರಾದ ಉಷಾರಾಣಿ ಅವರು ಮಾತನಾಡಿ, ಹೆಣ್ಣು ಮಕ್ಕಳಿಗೆ ಹಾಸ್ಟೆಲ್ ಅಗತ್ಯವಿತ್ತು. ಈ ನಿಟ್ಟಿನಲ್ಲಿ ಕಟ್ಟಡ ನಿರ್ಮಾಣ ಮಾಡಿರುವುದು ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬಾ ಅನು ಕೂಲವಾಗಿದೆ ಎಂದು ರೇವಣ್ಣ ಅವರು ಅಭಿಪ್ರಾಯಪಟ್ಟರು.

## ಜೂ.23 ರಂದು ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ಹೊಳೆನರಸೀಪುರ ನೋಡಲ್ ಕೇಂದ್ರ ವ್ಯಾಪ್ತಿಯ 66/11 ಕೆ.ವಿ. ವಿ.ವಿ. ಕೇಂದ್ರ ಹಂಗರಹಳ್ಳಿಯಲ್ಲಿ ಜೂ.23 ರಂದು ಮೊದಲನೇ ತ್ರೈಮಾಸಿಕ ನಿರ್ವಹಣಾ ಕಾರ್ಯವನ್ನು ನಿರ್ವಹಿಸಬೇಕಾಗಿರುವುದರಿಂದ ಹಂಗರಹಳ್ಳಿ ಶಾಖಾ ವ್ಯಾಪ್ತಿಯ ಗ್ರಾಮಗಳಾದ ಹಂಗರಹಳ್ಳಿ, ಹರಳಹಳ್ಳಿ, ಪಡುವಲಹಿಪ್ಪೆ, ಹಳೇಕೋಟೆ, ಹರದನಹಳ್ಳಿ, ಕ್ಯಾತನಹಳ್ಳಿ, ಕಾಮಸಮುದ್ರ, ಮಾವಿನಕೆರೆ, ಹನುಮನಹಳ್ಳಿ, ನ್ಯಾಮನಹಳ್ಳಿ, ಕಿನ್ನರಹಳ್ಳಿ, ಹಾಗೂ ಗೊರೂರು ಶಾಖಾ ವ್ಯಾಪ್ತಿಯ ಗ್ರಾಮಗಳಾದ ಮಲ್ಲಿದೇವರಪುರ, ಸೀಗೂರು, ಅಂಕಪುರ, ಮಲ್ಲಿನಾಯಕನಹಳ್ಳಿ, ಕಬ್ಬತ್ತಿ, ಚನ್ನಾಂಗಿಹಳ್ಳಿ, ದೊಡ್ಡಬೀಕನಹಳ್ಳಿ, ಬಾಚಿಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಜೂ.23 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹೊಳೆನರಸೀಪುರ ನೋಡಲ್ ಕೇಂದ್ರದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಲೇರಿಯ ವಿರೋಧಿ ಮಾಸಾಚರಣೆ



• ಪ್ರಜೋದಯ ವರದಿ

ಅರಕಲಗೂಡು: ತಾಲ್ಲೂಕಿನ ಕೊಣನೂರು ಬಿ.ವಿ.ಎಂ. ಬಾಲಿಕಾ ಪ್ರೌಢಶಾಲೆ ಹಾಗೂ ಬಿಎಸ್‌ಎಸ್ ಸರ್ಕಾರಿ ಪ್ರೌಢಶಾಲೆಗಳಲ್ಲಿ ಸಮುದಾಯ ಆರೋಗ್ಯ ಕೇಂದ್ರ ಕೊಣನೂರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಹಂಡ್ರಂಗಿ ವತಿಯಿಂದ ಡೆಂಗ್ಯೂ, ಮಲೇರಿಯ ವಿರೋಧಿ ಮಾಸಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಆರೋಗ್ಯ ನಿರೀಕ್ಷಕ ಎಂ.ಆರ್. ಆನಂದಗೌಡ ಮಾತನಾಡಿ, ಮಲೇರಿಯ ರೋಗಾಣು ಬರೀ ಕಣ್ಣಿಗೆ ಕಾಣಿಸದ ಒಂದು ಅತೀ ಸಣ್ಣ ಕ್ರಿಮಿ. ಇದಕ್ಕೆ ಪರೋಪ ಜೀವಿ ಎಂದು ಕರೆಯಲಾಗುತ್ತದೆ. ಈ ಪರೋಪ ಜೀವಿಯನ್ನು ಸೂಕ್ಷ್ಮದರ್ಶಕಯಂತ್ರದಿಂದ ಮಾತ್ರ ನೋಡಲು ಸಾಧ್ಯ. ಅನಾಫಿಲೀಸ್ ಜಾತಿಯ ಹೆಣ್ಣು ಸೊಳ್ಳೆಗಳು ಮಲೇರಿಯ ರೋಗವನ್ನು ಒಬ್ಬರಿಂದೊಬ್ಬರಿಗೆ ಹರಡುತ್ತದೆ. ಮನುಕುಲಕ್ಕೆ ಅತೀ ಅಪಾಯಕಾರಿಯಾಗಿರುವ ಜೀವಿ ಸೊಳ್ಳೆ. ಈ ಕೀಟ ಬಲು ಚಿಕ್ಕದಾದರೂ ಅವುಗಳ ಕಾಟ ಬಲು ದೊಡ್ಡದು. ಮನೆಯ ಸುತ್ತಮುತ್ತಲಿನ ಪರಿಸರವನ್ನು ಸೊಳ್ಳೆ ಉತ್ಪತ್ತಿ ತಾಣಗಳಿಂದ ಮುಕ್ತಗೊಳಿಸಿ. ಡೆಂಗ್ಯೂ, ಮಲೇರಿಯಾ ಜ್ವರ ನಿಯಂತ್ರಣ ನಮ್ಮೆಲ್ಲರ ಜವಾಬ್ದಾರಿ ಆಗಬೇಕು. ಮಲೇರಿಯಾ, ಡೆಂಗ್ಯೂ, ಚಿಕೂನ್ ಗುನ್ಯಾದಂತಹ ರೋಗಗಳನ್ನು ನಿರ್ಲಕ್ಷ್ಯ ಮಾಡಿದರೆ ಅಪಾಯ ತಪ್ಪಿದ್ದಲ್ಲ ಎಂದರು.

ಚಳಿಯ ನಂತರ ವಿಪರೀತ ಜ್ವರ, ಸ್ವಲ್ಪ ಹೊತ್ತಿನ ನಂತರ ಮೈ ಬೆವರುವುದು. ಮೈ ಕೈ ನೋವು, ತಲೆ ನೋವು, ಕೆಲವರಿಗೆ ವಾಂತಿ, ನಂತರ ನಿಶ್ಯಕ್ತಿ. ಈ ಲಕ್ಷಣಗಳು ದಿನ ಬಿಟ್ಟು ದಿನ ಅಥವಾ ಪ್ರತಿ ದಿನ ಬರಬಹುದು. ಯಾವುದೇ ಜ್ವರ ಇರಬಹುದು, ಆದಷ್ಟು ಶೀಘ್ರವಾಗಿ ರಕ್ತ ಪರೀಕ್ಷೆ ಮಾಡಿಸಿ ವೈದ್ಯರ ಸಲಹೆ ಪಡೆದು ಗುಳಿಗೆಗಳನ್ನು ತೆಗೆದುಕೊಳ್ಳಿ. ಈ ಗುಳಿಗೆಗಳು ಎಲ್ಲಾ ಸರ್ಕಾರಿ, ಆಸ್ಪತ್ರೆಗಳು ಹಾಗೂ ಆರೋಗ್ಯ ಸಹಾಯಕರಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರೆಯುತ್ತದೆ. ಯಾವುದೇ ಜ್ವರ ಬಂದ ಕೂಡಲೇ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆಯಿರಿ. ಆರೋಗ್ಯ ಇಲಾಖೆಯವರು ನೀಡುವ ಮಾಹಿತಿಗಳನ್ನು ಸಾರ್ವಜನಿಕರು ಸರಿಯಾಗಿ ಪಾಲಿಸಿದಲ್ಲಿ ರೋಗಗಳಿಂದ ಮುಕ್ತಿ ಪಡೆಯಬಹುದು ಎಂದರು.

ಈ ಸಂದರ್ಭದಲ್ಲಿ ಸಮುದಾಯ ಆರೋಗ್ಯ ಕೇಂದ್ರದ ಹಿರಿಯ ಆರೋಗ್ಯ ನಿರೀಕ್ಷಕ ಮಹೇಶ್, ಶಾಲೆಗಳ ಮುಖ್ಯ ಶಿಕ್ಷಕರುಗಳು, ಸಹ ಶಿಕ್ಷಕರು, ಸಿಬ್ಬಂದಿ ವರ್ಗ ಇದ್ದರು.

# ವ್ಯಕ್ತಿತ್ವ ವಿಕಸನಕ್ಕೆ ಸ್ಕೌಟ್ಸ್ ಗೈಡ್ಸ್ ಸಹಕಾರಿ

• ಪ್ರಜೋದಯ ವರದಿ

**ಆಲೂರು:** ಅಬಾಲವೃದ್ಧರಾದಿಯಾಗಿ ಯೋಗ ಮಾನಸಿಕವಾಗಿ ಹಾಗೂ ಶಾರೀರಿಕವಾಗಿ ಸದೃಢಗೊಳಿಸುವುದರ ಜೊತೆಗೆ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗುತ್ತದೆ ಎಂದು ಭಾರತ್ ಸ್ಕೌಟ್ಸ್ ಗೈಡ್ಸ್ ಆಲೂರು ಸ್ಥಳೀಯ ಸಂಸ್ಥೆ ಉಪಾಧ್ಯಕ್ಷೆ ಸಿ.ಎಸ್. ಪೂರ್ಣಿಮಾ ಅವರು ತಿಳಿಸಿದರು.




ತಾಲ್ಲೂಕು ಭಾರತ್ ಸ್ಕೌಟ್ಸ್ ಗೈಡ್ಸ್ ಸ್ಥಳೀಯ ಸಂಸ್ಥೆ, ಬೈರಾಪುರ ಬೆಥಸ್ದ ಆಂಗ್ಲ ಮಾಧ್ಯಮ ಶಾಲೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಗಿಡವಾದಾಗ ಬಗ್ಗದ್ದು ಮರವಾದಾಗ ಬಗ್ಗೀತೆ ಎಂಬ ನಾಣ್ಣುಡಿಯಂತೆ ಎಳೆಯ ವಯೋಮಾನದಿಂದಲೇ ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಂಡಾಗ ಆದರ್ಶ ವ್ಯಕ್ತಿತ್ವ ರೂಢಿಸಿಕೊಳ್ಳಬಹುದು ಎಂದು ಅವರು ಹೇಳಿದರು.

ಪ್ರತಿದಿನ ಸರಳ ವ್ಯಾಯಾಮ, ಲಘು ಯೋಗಾಸನ, ನಿಯಮಿತ ಆಹಾರ, ಏಕಾಗ್ರತೆಯ ಓದು ವಿದ್ಯಾರ್ಥಿಯನ್ನು ಸರ್ವತೋಮುಖ ಬೆಳವಣಿಗೆಯತ್ತ ಕೊಂಡೊಯ್ಯುತ್ತದೆ. ಇತ್ತೀಚಿನ ದಿನಗಳಲ್ಲಿ ಮಕ್ಕಳಿಂದ ವೃದ್ಧರವರೆಗೂ ಹೃದಯಾಘಾತ ಹೇರಳವಾಗಿ ಕಾಡುತ್ತಿರುವುದು ದುರಂತದ ಸಂಗತಿ. ಆರೋಗ್ಯದ ಕಾಳಜಿ ಎಲ್ಲರಿಗೂ ಅಗತ್ಯವಾಗಿದೆ ಎಂದರು.

ಜಿಲ್ಲಾ ಸಹಾಯಕ ಆಯುಕ್ತ ಎಂ.ಬಾಲಕೃಷ್ಣ ಮಾತನಾಡಿ, ವ್ಯಕ್ತಿಗೆ ಆಸ್ತಿ, ಸಿರಿವಂತಿಕೆಗಿಂತ ಆರೋಗ್ಯ ಮುಖ್ಯ. ಊಟದ ದಿನಚರಿ ಜೊತೆಗೆ ಯೋಗ, ವ್ಯಾಯಾಮದ ದಿನಚರಿಯೂ ಪೂರಕವಾಗಿದ್ದಾಗ ಮಾತ್ರ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ ಎಂದು ಹೇಳಿದರು.

ಭಾರತ್ ಸ್ಕೌಟ್ಸ್ ಗೈಡ್ಸ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಕೊಟ್ರೇಶ್ ಎಸ್.ಉಪ್ಪಾರ್, ಬೈರಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಗೈಡ್ ನಾಯಕಿ ಅಶ್ವಿನಿ, ಲೇಡಿ ಸ್ಕೌಟ್ ನಾಯಕಿ ರೇಣುಕಾಮೋಹನ್, ಬೈರಾಪುರ ಎಸ್.ವಿ. ಆಂಗ್ಲ ಮಾಧ್ಯಮ ಶಾಲೆಯ ಲೇಡಿ ಸ್ಕೌಟ್ ನಾಯಕಿ ರೋಸ್‌ಮೇರಿ, ಆಲೂರಿನ ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯ ಲೇಡಿ ಸ್ಕೌಟ್ ನಾಯಕಿ ಜ್ಯೋತಿ, ಗೈಡ್ ನಾಯಕಿ ರೂಹಿ ಪಾಲ್ಗೊಂಡಿದ್ದರು.

# ಮನಸ್ಸಿಗೆ ನೆಮ್ಮದಿ ಕಲ್ಪಿಸುವಲ್ಲಿ ಚಿತ್ರಕಲೆ ಪ್ರಮುಖ ಪಾತ್ರ

## ಕಲೆಯು ನಿಂತ ನೀರಾಗಬಾರದು, ಹರಿಯುವ ನೀರಾಗಬೇಕು

• ಪ್ರಜೋದಯ ವರದಿ

**ಹಾಸನ:** ಮನುಷ್ಯನಲ್ಲಿರುವ ಅಂತರಾತ್ಮದ ನೆಲೆಯನ್ನು ಹೊರಹಾಕಿ ಮನಸ್ಸಿಗೆ ನೆಮ್ಮದಿ ಕಲ್ಪಿಸುವಲ್ಲಿ ಚಿತ್ರಕಲೆ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹಿರಿಯ ಸಾಹಿತಿ ಹಾಗೂ ಹಂಪಿ ವಿಶ್ವವಿದ್ಯಾಲಯದ ನಿರ್ದೇಶಕ ಹೆಬ್ಬಾಲೆ ನಾಗೇಶ್ ತಿಳಿಸಿದರು.

ಒಡನಾಡಿ ಚಿತ್ರಕಲಾ ಬಳಗದ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ನಗರದ ಹಾಸನಾಂಬ ಕಲಾಕ್ಷೇತ್ರದ ಆವರಣದಲ್ಲಿ ಭಾನುವಾರ ಚಿತ್ರಕಲಾ ಪ್ರದರ್ಶನ ಹಾಗೂ ಕಲಾವಿದರಿಗೆ ಪ್ರಶಸ್ತಿ ಪ್ರಧಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಡೀ ಒಂದು ಇತಿಹಾಸದ ಘಟನೆಯನ್ನು ಒಂದು ಚಿತ್ರ ಬಣ್ಣಿಸಬಹುದಾದ ಶಕ್ತಿ ಹೊಂದಿದೆ ಎಂದು ವಿವರಿಸಿದರು.

ಇತ್ತೀಚಿನ ದಿನಗಳಲ್ಲಿ ಚಿತ್ರಕಲೆ ನಶಿಸಿ ಹೋಗುತ್ತಿದೆ, ಅವುಗಳನ್ನು ಉಳಿಸಿ ಬೆಳೆಸುವುದು ನಮ್ಮ-ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.



ಕಲೆಯು ನಿಂತ ನೀರಾಗಬಾರದು ಹರಿಯುವ ನೀರಾಗಬೇಕು, ಮಕ್ಕಳಲ್ಲಿ ಕಲೆಗಳನ್ನು ಉತ್ತೇಜಿಸುವ ಕೆಲಸ ಮಾಡಬೇಕು. ಚಿತ್ರಕಲೆ ಇತ್ತೀಚೆಗೆ ಆರ್ಥಿಕವಾಗಿಯೂ ಸಹಕಾರವಾಗಲಿದೆ, ಇದನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು. ಚಿತ್ರಕಲೆಯಿಂದ ಜ್ಞಾನ ಮಟ್ಟವೂ ಹೆಚ್ಚಾಗುತ್ತದೆ ಎಂದು ಅವರು ಕರೆ ನೀಡಿದರು.

ಈ ವೇಳೆ ಕಾರ್ಯಕ್ರಮದ ಅಂಗವಾಗಿ ಈ ಹಿಂದೆ ನಡೆದಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಾಹಿತಿ ಹಾಗೂ ಹಿರಿಯ ಲೇಖಕ ಗೊರೂರು ಅನಂತರಾಜು, ಅಂಕಪುರ ಪ.ಪೂ ಕಾಲೇಜು ನಿವೃತ್ತ ಪ್ರಾಂಶುಪಾಲ ಗಣೇಶ್, ಜಾನಪದ ಕಲಾವಿದ ಗ್ಯಾರಂಟಿ ರಾಮಣ್ಣ, ಜನಪದ ಗಾಯಕಿ ಸುನಂದಾ ಕೃಷ್ಣಮೂರ್ತಿ, ಗೋಡೆ ಬರಹಗಾರ ಯಾಕೂಬ್, ಚಿತ್ರಕಲಾವಿದ ವಸಂತ್‌ಕುಮಾರ್ ಸೇರಿದಂತೆ ಇನ್ನಿತರರು ಹಾಜರಿದ್ದರು.

## ಅಂಗನವಾಡಿ ಕಾರ್ಯಕರ್ತೆ-ಸಹಾಯಕಿ ಹುದ್ದೆಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಶಿಶು ಅಭಿವೃದ್ಧಿ ಯೋಜನಾ ಕಚೇರಿ ವ್ಯಾಪ್ತಿಯಲ್ಲಿ 2 ಅಂಗನವಾಡಿ ಕಾರ್ಯಕರ್ತೆ ಹಾಗೂ 4 ಅಂಗನವಾಡಿ ಸಹಾಯಕಿ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

ಖಾಲಿ ಹುದ್ದೆಗಳು ಸೇರಿ ಒಟ್ಟು 32 ಕಾರ್ಯಕರ್ತೆ, 108 ಸಹಾಯಕಿ ಹುದ್ದೆಗೆ ಆಸಕ್ತ ಸ್ಥಳೀಯ ಅಭ್ಯರ್ಥಿಗಳು ಕಚೇರಿಯಲ್ಲಿ ಅರ್ಜಿ ಪಡೆದು ಅವಶ್ಯಕ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದೆಂದು ಹಾಸನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಿಳಿಸಿದ್ದಾರೆ.

ಜೂ. 29 ಅರ್ಜಿ ಸಲ್ಲಿಸಲು ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅವರನ್ನು ಸಂಪರ್ಕಿಸ ಬಹುದೆಂದರು.

## ಅಗ್ನಿ ಅವಘಡ: 15 ವಿದ್ಯಾರ್ಥಿಗಳ ಸಾವು



• ಪ್ರಜೋದಯ ವರದಿ

**ಲಖನೌ:** ಇಲ್ಲಿನ ಅಲಿಗಂಜ್ ಪೊಲೀಸ್ ಠಾಣೆ ಪ್ರದೇಶದ ಪುರಾಣಿ ಪ್ರದೇಶದ ಕೋಚಿಂಗ್ ಸೆಂಟರ್ ನಲ್ಲಿ ಇಂದು ಭಾರಿ ಬೆಂಕಿ ಕಾಣಿಸಿಕೊಂಡಿದ್ದು 15 ಮಂದಿ ಸಜೀವ ದಹನವಾಗಿದ್ದಾರೆ. ಇನ್ನು ಪ್ರಾಣವನ್ನು ಉಳಿಸಿಕೊಳ್ಳಲು ಹಲವರು ಕಟ್ಟಡದಿಂದ ಜಿಗಿದಿದ್ದಾರೆ.

ಈ ವಿಡಿಯೋ ಸದ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಸ್ಥಳೀಯ ನಿವಾಸಿಗಳು ರಕ್ಷಣಾ ಮತ್ತು ಪರಿಹಾರ ಪ್ರಯತ್ನಗಳನ್ನು ಪ್ರಾರಂಭಿಸಿದರು. ಸಿಕ್ಕಿಬಿದ್ದವರನ್ನು ಸ್ಥಳಾಂತರಿಸುವಲ್ಲಿ ಆಡಳಿತಕ್ಕೆ ಸಹಾಯ ಮಾಡಿದರು. ಅಗ್ನಿಶಾಮಕ ದಳ ಮತ್ತು ಪೊಲೀಸ್ ತಂಡಗಳು ತಕ್ಷಣ ಸ್ಥಳಕ್ಕೆ ಆಗಮಿಸಿದ್ದು ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿದೆ.

# ಕೆ.ಎಂ.ಶಿ.ಗೆ ಸಚಿವ ಸ್ಥಾನ ನೀಡಲು ಮನವಿ

• ಪ್ರಜೋದಯ ವರದಿ

**ಅರಸೀಕೆರೆ:** ಶೋಷಿತ ವರ್ಗಗಳು ಹಾಗೂ ಹಿಂದುಳಿದ ಸಮುದಾಯಗಳ ಬಗ್ಗೆ ಕಳಕಳಿ ಹೊಂದಿರುವ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರಿಗೆ ಮಂತ್ರಿ ಸ್ಥಾನ ದೊರೆತರೆ ಜಿಲ್ಲೆಯಲ್ಲಿ ಮಾತ್ರವಲ್ಲದೆ ಮೈಸೂರು ಕರ್ನಾಟಕದ ಭಾಗದಲ್ಲೂ ಪಕ್ಷ ಸಂಘಟನೆಗೆ ಶಕ್ತಿ ಬರಲಿದ್ದು, ಕಾಂಗ್ರೆಸ್ ಹೈಕಮಾಂಡ್ ಮತ್ತು ಮುಖ್ಯಮಂತ್ರಿ ಡಿ.ಕೆ.ಶಿ. ಅವರು ಕೆಎಂಶಿಗೆ ಸಚಿವ ಸ್ಥಾನ ನೀಡುವಂತೆ ಸವಿತಾ ಸಮಾಜದ ಮುಖಂಡರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸವಿತಾ ಸಮಾಜದ ಉಪಾಧ್ಯಕ್ಷ ವಿಜಯ್ ಕುಮಾರ್ ಮಾತನಾಡಿ, ಸತತ ನಾಲ್ಕು ಬಾರಿ ದಾಖಲೆ ಬಹುಮತಗಳೊಂದಿಗೆ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗುತ್ತಾ ಬಂದಿರುವ ಶಿವಲಿಂಗೇಗೌಡರು ಕ್ಷೇತ್ರವನ್ನು ಇಂದು ರಾಜ್ಯದಲ್ಲೇ ಮಾದರಿ ಕ್ಷೇತ್ರವನ್ನಾಗಿ ಅಭಿವೃದ್ಧಿ ಮಾಡಿದ್ದಾರೆ. ಇವರ ಕಾರ್ಯವೈಕರಿ ಇತರ ಶಾಸಕರಿಗೂ ಮಾದರಿಯಾಗಿದ್ದು ಇಂತಹ ಜನಪರ ಕಾಳಜಿ ಹೊಂದಿರುವ, ರೈತರು, ಕೂಲಿ ಕಾರ್ಮಿಕರು, ಬಡವರ ನೋವು -ನಲಿವುಗಳನ್ನು ಹತ್ತಿರದಿಂದ ಬಲ್ಲವರಾಗಿರುವುದರಿಂದ ಇವರಿಗೆ ನೀಡುವ ಯಾವುದೇ ಖಾತೆಯನ್ನಾದರೂ ಯಶಸ್ವಿಯಾಗಿ ನಿಭಾಯಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದರು.



ಅರಸೀಕೆರೆ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ಯಾವೊಬ್ಬ ಶಾಸಕರಿಗೂ ಇಲ್ಲಿಯವರೆಗೂ ಸಚಿವರಾಗುವ ಅವಕಾಶ ದೊರೆಯದೆ ಇರುವುದು ಕ್ಷೇತ್ರದ ಜನತೆಯ ಅಸಮಾಧಾನವಾಗಿದೆ. ಕಳೆದ ವಿಧಾನ ಸಭೆ ಚುನಾವಣೆಯ ಸಂದರ್ಭದಲ್ಲಿ ಸ್ವತಹ ಡಿ.ಕೆ.ಶಿವಕುಮಾರ್ ಮತ್ತು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಿವಲಿಂಗೇಗೌಡರಿಗೆ ಈ ಬಾರಿ ಸಚಿವ ಸ್ಥಾನ ನೀಡುವುದಾಗಿ ಬಹಿರಂಗ ಸಭೆಯಲ್ಲಿ ಭರವಸೆ ನೀಡಿದ್ದು ಆ ಭರವಸೆಯನ್ನು ಈಡೇರಿಸುವಂತೆ ಒತ್ತಾಯಿಸುವುದಾಗಿ ಹೇಳಿದರು.

ಖಜಾಂಚಿ ರಾಜು ಮಾತನಾಡಿ, ಸತತವಾಗಿ ನಾಲ್ಕನೇ ಬಾರಿಗೆ ಶಾಸಕರಾಗಿ ಎರಡು ಬಾರಿ ರಾಜ್ಯ ಗೃಹ ಮಂಡಳಿಯ ಅಧ್ಯಕ್ಷರಾಗಿ ತಮಗೆ ದೊರೆತಿರುವ ಅವಕಾಶವನ್ನು ಜನರ ಸೇವೆಗೆ ಬಳಸಿಕೊಂಡಿರುವ ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ಸಿಕ್ಕಿದೆ ಆದರೆ ರಾಜ್ಯದ ಜನತೆಗೆ ನ್ಯಾಯ ಒದಗಿಸುವುದಲ್ಲದೆ ಪಕ್ಷ ಸಂಘಟನೆಗೂ ಶಕ್ತಿ ತುಂಬುವುದರಲ್ಲಿ ಸಂದೇಹವಿಲ್ಲ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ತಾಲ್ಲೂಕು ಸವಿತಾ ಸಮಾಜದ ಗೌರವಾಧ್ಯಕ್ಷ ನಾರಾಯಣಸ್ವಾಮಿ, ಮುಖಂಡರಾದ ರಾಜುಮಣಿ, ಧರ್ಮ, ನಾಗೇಂದ್ರ, ನಾಗರಾಜ್, ರಘು ಸೇರಿ ಇತರರು ಉಪಸ್ಥಿತರಿದ್ದರು.

# ಧರ್ಮಸ್ಥಳ ವಾತ್ಸಲ್ಯ ಯೋಜನೆ: ರಾಜ್ಯದಲ್ಲಿ 943 ಮನೆ ನಿರ್ಮಾಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪೂಜ್ಯ ಡಾ. ವೀರೇಂದ್ರ ಹೆಗಡೆಯವರ ಮಾರ್ಗದರ್ಶನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಾತ್ಸಲ್ಯ ಕಾರ್ಯಕ್ರಮದ ವತಿಯಿಂದ ರಾಜ್ಯದಲ್ಲಿ ಬಡವರಿಗೆ 943 ಮನೆಗಳನ್ನು ನಿರ್ಮಾಣ ಮಾಡಿಕೊಡಲಾಗಿದೆ ಎಂದು ತಿಪಟೂರು ಗ್ರಾಮಾಂತರ ಯೋಜನಾಧಿಕಾರಿ ಸುರೇಶ್ ಹೇಳಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಿಪಟೂರು ಯೋಜನಾ ಕಚೇರಿ ವ್ಯಾಪ್ತಿಯ ಬಾಗೂರು ಹೋಬಳಿ, ಕಾರೇಹಳ್ಳಿ ಗ್ರಾಮದಲ್ಲಿ ವಾತ್ಸಲ್ಯ ಕಾರ್ಯಕ್ರಮದ ಮೂಲಕ ನೂತನ ಮನೆ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಈಗಾಗಲೇ ಕಾರೇಹಳ್ಳಿ ಗ್ರಾಮದ ದೇವಮ್ಮ ಎಂಬುವವರು ಯೋಜನೆಯ ವತಿಯಿಂದ ಪ್ರತಿ ತಿಂಗಳು ಒಂದು ಸಾವಿರ ಮಾಶಾಸನ ಪಡೆಯುತ್ತಿದ್ದು, ಅವರಿಗೆ ವಾರಸುದಾರರು ಹಾಗೂ ಸಂಬಂಧಿಕರು ಇಲ್ಲ, ಸ್ವಂತ ಮನೆಯಿಲ್ಲದೆ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ. ಕಡು ಬಡತನದಲ್ಲಿದ್ದ ದೇವಮ್ಮ ಅವರಿಗೆ ವಾತ್ಸಲ್ಯ ಯೋಜನೆಯಡಿ ನಿವೇಶನದಲ್ಲಿ ಸುಮಾರು 1.50 ಲಕ್ಷ ರೂ. ವೆಚ್ಚದಲ್ಲಿ ಮನೆಯ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದೆ. ನಿರ್ದಿಷ್ಟ ಅವಧಿಯೊಳಗೆ ಮನೆ ನಿರ್ಮಾಣವಾಗಲಿದ್ದು, ಸದ್ಯದಲ್ಲೇ ಫಲಾನುಭವಿಗೆ ಮನೆ ಹಸ್ತಾಂತರಿಸುವುದಾಗಿ ಭರವಸೆ ನೀಡಿದರು.



ಕಾರ್ಯಕ್ರಮದಲ್ಲಿ ಕಾರೇಹಳ್ಳಿ ವಲಯದ ಮೇಲ್ವಿಚಾರಕ ಚಂದನ್, ಜ್ಞಾನವಿಕಾಸ ಸಮನ್ವಯ ಅಧಿಕಾರಿ ಭಾಗ್ಯಲಕ್ಷ್ಮಿ, ಗುತ್ತಿಗೆದಾರ ನರಸಿಂಹ' ಮೂರ್ತಿ, ಸೇವಾ ಪ್ರತಿನಿಧಿ ಶಶಿರೇಖಾ ಸೇರಿ ಗ್ರಾಮಸ್ಥರು ಹಾಜರಿದ್ದರು.



ಹಾಸನ: ನಗರದ ಶಾಂತಿನಗರ ಬಡಾವಣೆಯಲ್ಲಿ ಪ್ರಕೃತಿ ಮಹಿಳಾ ಸಂಘದ ವತಿಯಿಂದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು.


## ಕಳೆದು ಹೋಗಿದೆ
## ಸಾರ್ವಜನಿಕರ ಗಮನಕ್ಕೆ

ಪಿರಿಯಾಪಟ್ಟಣ ತಾಲ್ಲೂಕಿನ ಕೊಪ್ಪ ಗ್ರಾಮದ ಡುಂಗ್ರಿ ಕಾಲೋನಿಯಲ್ಲಿ ಕೆಳಕಂಡ ದಾಖಲೆಗಳು ಕಳೆದು ಹೋಗಿರುತ್ತವೆ.

ಕಳೆದು ಹೋದ ದಾಖಲೆ ವಿವರಗಳು :
Rigister Sale Deed
Document No/Identification
PYP-1-04479-2012-13 25-Aug-2012 and
PYP-1-04480-2012-13 25-Aug-2012
ರಿಪೋರ್ಟ್ ನಂ : 2268895/2026
ಕಳೆದು ಹೋದ ದಿನಾಂಕ : 22/06/2026
ಸ್ಥಳ : ಡುಂಗ್ರಿ ಕಾಲೋನಿ, ಕೊಪ್ಪ ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕು.
ಈ ದಾಖಲೆಗಳು ಯಾರಿಗಾದರೂ ಸಿಕ್ಕಲ್ಲಿ ದಯವಿಟ್ಟು ಕೆಳಗಿನ ವಿಳಾಸ / ದೂರವಾಣಿ ಸಂಖ್ಯೆಗೆ ಸಂಪರ್ಕಿಸಲು ವಿನಂತಿ.
ಹೆಸರು : ಪೂಜಾರಿ ಕೆ.ಡಿ
ಮೊಬೈಲ್ ನಂ : 8546960567
ವಿಳಾಸ: ಡುಂಗ್ರಿ ಕಾಲೋನಿ, ಕೊಪ್ಪ ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕು.


# ಮುಖ್ಯದ್ವಾರದ ಕಲ್ಲು ಕಂಬ ಪ್ರತಿಷ್ಠಾಪನೆ



• ಪ್ರಜೋದಯ ವರದಿ

**ಅರಸೀಕೆರೆ:** ನಗರದ ಹೃದಯ ಭಾಗದಲ್ಲಿ ನೆಲೆಸಿರುವ ಪುರಾತನ ರುದ್ರಗುಡಿ ದೇವಾಲಯದ ನೂತನ ಗುಡಿಯ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು ದೇವಾಲಯದ ಮುಖ್ಯದ್ವಾರದ ಕಲ್ಲು ಕಂಬ ಪ್ರತಿಷ್ಠಾಪನೆ ಮಾಡಲಾಯಿತು.

ನೂರಾರು ವರ್ಷಗಳ ಇತಿಹಾಸವಿರುವ ರುದ್ರ ಗುಡಿಯಲ್ಲಿ ನೆಲೆಸಿರುವ ರುದ್ರ ದೇವರಿಗೆ ತಾಲೂಕಿನಲ್ಲಿ ಮಾತ್ರವಲ್ಲ ರಾಜ್ಯಾದ್ಯಂತ ಭಕ್ತ ಸಮೂಹವಿದ್ದು ಶಿಥಿಲಾವಸ್ಥೆ ದೇವಾಲಯವನ್ನು ತೆರವು ಮಾಡಿ ಸಂಪೂರ್ಣವಾಗಿ ಕಲ್ಲಿನಿಂದ ದೇವಾಲಯವನ್ನು ನಿರ್ಮಿಸಲು ದೇವಾಲಯದ ಸೇವಾ ಸಮಿತಿ ಹಾಗೂ ಭಕ್ತವೃಂದ ಮುಂದಾಗಿದ್ದು ಈಗಾಗಲೇ ದೇವಾಲಯದ ನಿರ್ಮಾಣ ಕಾಮಗಾರಿ 80ರಷ್ಟು ಮುಗಿದಿದೆ.

ಈ ಕುರಿತು ಶ್ರೀ ರುದ್ರೇಶ್ವರ ಸ್ವಾಮಿ ಸೇವಾ ಟ್ರಸ್ಟ್‌ನ ಕಾರ್ಯದರ್ಶಿ ಪ್ರಭುಕುಮಾರ್ ಮಾತನಾಡಿ ಲಕ್ಷಾಂತರ ಭಕ್ತರ ಆರಾಧ್ಯ ದೈವವಾಗಿರುವ ಮಹಾ ರುದ್ರನ ದೇವಾಲಯವು ಭಕ್ತರ ತನು ಮನ ಧನ ಸಹಕಾರದಿಂದ ಪ್ರಗತಿಯಲ್ಲಿದೆ.

ಲಕ್ಷಾಂತರ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ದೇವಾಲಯದ ನಿರ್ಮಾಣಕ್ಕೆ ಇನ್ನು ಹೆಚ್ಚಿನ ಧನ ಸಹಾಯದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಭಕ್ತರಿಂದ ಮತ್ತಷ್ಟು ಸಹಕಾರವನ್ನು ಸೇವಾ ಸಮಿತಿ ಬಯಸಿದ್ದು ದಾನ ಮಾಡುವ ಭಕ್ತರು ಮುಂದೆ ಬಂದು ದಯಾಮಯನಾದ ರುದ್ರ ದೇವರ ಅನುಗ್ರಹಕ್ಕೆ ಪಾತ್ರರಾಗುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸೇವಾ ಸಮಿತಿಯ ಖಜಾಂಚಿ ಬಸವರಾಜು, ಸಮಿತಿಯ ನಾಗೇಶ್, ಹೇಮರಾಜ್, ಎಸ್.ವಿಜಯಕುಮಾರ್, ಶಿಲ್ಪಾ, ಸೌಜನ್ಯ ವಿಜಯ್, ವಿಜಯಮ್ಮ, ದೇವಸ್ಥಾನದ ಶಿಲ್ಪಿ ಕಾರ್ತಿಕ್ ಮತ್ತು ಭಕ್ತ ವೃಂದ ಉಪಸ್ಥಿತರಿದ್ದರು.

## ರಾಜಕೀಯ ಪಕ್ಷಗಳು ತಮ್ಮ ಏಜೆಂಟ್ ನೇಮಕ ಮಾಡಬೇಕು: ಡಿ.ಸಿ.

# ಪಾರದರ್ಶಕವಾಗಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ

• ಪ್ರಜೋದಯ ವರದಿ

**ಹಾಸನ:** ಪ್ರತಿ ಬೂತ್‌ಗಳಿಗೂ ರಾಜಕೀಯ ಪಕ್ಷಗಳು ತಮ್ಮ ಏಜೆಂಟ್ ನೇಮಕ ಮಾಡಬೇಕು. ಇದರಿಂದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ಸಹಕಾರಿ ಆಗಲಿದೆ ಜೊತೆಗೆ ಪಾರದರ್ಶಕವಾಗಿ ಪ್ರಕ್ರಿಯೆ ನಡೆಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಲತಾಕುಮಾರಿ ಅವರು ತಿಳಿಸಿದ್ದಾರೆ.

ನಗರದ ಹಾಸನಾಂಬ ಕಲಾಭವನದಲ್ಲಿ ಸೋಮವಾರ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಕುರಿತು ಹಾಸನ ವಿಧಾನ ಸಭಾ ಕ್ಷೇತ್ರದ ಚುನಾಯಿತ ಜನಪ್ರತಿನಿಧಿಗಳು, ಮೇಲ್ವಿಚಾರಕರು, ಮತಗಟ್ಟೆ ಅಧಿಕಾರಿಗಳು ಹಾಗೂ ಮತಗಟ್ಟೆ ಏಜೆಂಟ್ ಅವರಿಗೆ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮತಗಟ್ಟೆ ಅಧಿಕಾರಿಗಳು ಜೂ.30 ರಿಂದ ಜುಲೈ.29 ರ ವರೆಗೆ ಮನೆ ಮನೆಗೆ ಭೇಟಿ ನೀಡಿ ಪೂರ್ವದಲ್ಲಿ ಮುದ್ರಣಗೊಂಡಿರುವ ನಮೂನೆಯನ್ನು ದ್ವಿಪ್ರತಿಯಲ್ಲಿ ನೀಡುತ್ತಾರೆ ಮತದಾರರು ಅದನ್ನು ಸಂಪೂರ್ಣವಾಗಿ ಭರ್ತಿ ಮಾಡಿ ಪ್ರಸ್ತುತ ಭಾವಚಿತ್ರ ಅಂಟಿಸಿ ಕಡ್ಡಾಯವಾಗಿ ಸಹಿ ಮಾಡಿ ಒಂದು ಪ್ರತಿಯನ್ನು ಮತಗಟ್ಟೆ ಅಧಿಕಾರಿಗೆ ಹಿಂದಿರುಗಿಸಬೇಕು ಎಂದರು.



ಪ್ರಜಾ ಪ್ರಾತಿನಿಧ್ಯ ಕಾಯ್ದೆ ಅಡಿಯಲ್ಲಿ ಮತದಾರರ ಪಟ್ಟಿ ತಯಾರಿಸುವುದು ಸಂವಿಧಾನಾತ್ಮಕ ಕರ್ತವ್ಯ, ಈ ನಿಟ್ಟಿನಲ್ಲಿ ದೇಶದಾದ್ಯಂತ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ರಮವು ನಡೆಯುತ್ತಿದ್ದು, 2025ರ ಮತದಾರರ ಪಟ್ಟಿಯಲ್ಲಿರುವ ಹೆಸರುಗಳಿಗೆ ಸಂಬಂಧಿಸಿದಂತೆ 2002 ರಲ್ಲಿರುವ ಮತದಾರರ ಪಟ್ಟಿಯ ಮತದಾರರ ಕುಟುಂಬದ ಸಂತತಿಗಳಿಗೆ ಮ್ಯಾಪಿಂಗ್ ಮಾಡಿ ಲಿಂಕ್ ಮಾಡಲಾಗುತ್ತಿರುವುದರಿಂದ ಯಾವ ಪ್ರಜೆಯೂ ಮತದಾನದಿಂದ ವಂಚಿತರಾಗದಂತೆ ಗಮನಹರಿಸಬೇಕು ಎಂದು ತಿಳಿಸಿದರು.

ಈಗಾಗಲೇ 16 ರಾಜ್ಯಗಳಲ್ಲಿ ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಮುಗಿದಿದೆ. ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಉಳಿದ ರಾಜ್ಯಗಳಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ನಡೆಯುತ್ತಿದೆ. ಅದರಂತೆ ಕರ್ನಾಟಕ ರಾಜ್ಯದಲ್ಲಿಯು ನಡೆಯುತ್ತಿದೆ. ಜಿಲ್ಲೆಗಳಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ಜಿಲ್ಲಾ ಚುನಾವಣಾಧಿಕಾರಿಯವರ ಪಾತ್ರ ಬಹುಮುಖ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ತರಬೇತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮತದಾರರ ಪಟ್ಟಿಯಿಂದ ಅರ್ಹ ಮತದಾರರು ಹೊರಗುಳಿಯದಂತೆ ನಿಗಾ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕರಡು ಮತದಾರರ ಪಟ್ಟಿಯನ್ನು ಆ.5 ರಂದು ಪ್ರಕಟಿಸಲಾಗುತ್ತದೆ, ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಆ.5 ರಿಂದ ಸೆ.4 ರ ವರೆಗೆ, ಹಕ್ಕು ಮತ್ತು ಆಕ್ಷೇಪಣೆಗಳ ತಿರುವಳಿ ಆ.5 ರಿಂದ ಅ.3 ರವರೆಗೆ, ಅಂತಿಮ ಮತದಾರರ ಪಟ್ಟಿಯನ್ನು ಅ.7 ರಂದು ಪ್ರಕಟಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

ವರ್ಷದಲ್ಲಿ ನಾಲ್ಕು ಬಾರಿ ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್ 1 ರಂದು ಮತದಾರರ ಪಟ್ಟಿ ಪರಿಷ್ಕರಣೆ ಆಗುತ್ತದೆ. ಆ ಸಂದರ್ಭದಲ್ಲಿ 18 ವರ್ಷ ಪೂರೈಸಿದವರು ಹೊಸ ಅರ್ಜಿ ಸಲ್ಲಿಸಬಹುದಾಗಿದೆ. ಪ್ರಸ್ತುತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಾಗಿ ಹೊಸ ಮತದಾರರ ಪಟ್ಟಿ ತಯಾರಿಸಲಾಗುತ್ತದೆ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಮಹಾನಗರ ಪಾಲಿಕೆಯ ಆಯುಕ್ತ ಕೃಷ್ಣಮೂರ್ತಿ, ತಹಸೀಲ್ದಾರ್ ಗೀತಾ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.


ಸಮಗ್ರ ಶಿಕ್ಷಣ ಕರ್ನಾಟಕ

**ಉಪ ನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಹಾಸನ ಜಿಲ್ಲೆ, ಹಾಸನ**

ದೂರವಾಣಿ ಸಂಖ್ಯೆ: 08172 295020 ಇಮೇಲ್ ವಿಳಾಸ: ssahassan2003@gmail.com

ಸಂ: ಸಶಿಕ/ಲೆ.ಪ.3/ಕೆ.ಜಿ.ಬಿ.ವಿ.(ಟೈಪ್1)/ಅ.ಪೂ./07/2026-27

ದಿನಾಂಕ:20-06-2026

**ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ**

2026-27ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಕೆ.ಜಿ.ಬಿ.ವಿ.(Type-1) ವಸತಿ ಶಾಲೆ ಹಳ್ಳಿಮೈಸೂರು ಇಲ್ಲಿಗೆ ಹೊರಗುತ್ತಿಗೆ ಆಧಾರದಲ್ಲಿ ಆಹಾರ ಪೂರೈಕೆ ಮಾಡುವ ಸಂಬಂಧ ಅರ್ಹ ಸಂಸ್ಥೆ/ಏಜೆನ್ಸಿಯವರಿಂದ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಿದ್ದು, https://kppp.karanataka.gov.in ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಎರಡು ಪ್ರತ್ಯೇಕ ಟೆಂಡರ್ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ದಿನಾಂಕಗಳು ಈ ಕೆಳಕಂಡಂತಿರುತ್ತದೆ. ಟೆಂಡರ್‌ನ ಅಂದಾಜು ಮೊತ್ತ: ಕೆ.ಜಿ.ಬಿ.ವಿ.(Type-1) ವಸತಿ ಶಾಲೆ ರೂ. 20,40,000/- ಪ್ರಾರಂಭದ ದಿನಾಂಕ: 20-06-2026, ಕೊನೆಯ ದಿನಾಂಕ: 29-06-2026, 5.30 PM. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01-07-2026ರ 11.00 AM, ಆರ್ಥಿಕ ಬಿಡ್ ತೆರೆಯುವ ದಿನಾಂಕ: 03-07-20268 11.00 AM. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 94489 99398 ನ್ನು ಸಂಪರ್ಕಿಸಲು ಕೋರಿದೆ.

ಸಹಿ/-ಉಪನಿರ್ದೇಶಕರು, ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಹಾಸನ.

ವಾಸಾಸಂಇ/ಹಿಸನಿ/ಹಾಸನ/266/ಕೆಎಸ್‌ಎಂಸಿಎ/2026-27

# ಪರಿಷತ್ ಚುನಾವಣೆ: ಬಿಜೆಪಿ ಬಂಡಾಯ ಅಭ್ಯರ್ಥಿ ಗೆಲುವು

• ಪ್ರಜೋದಯ ವರದಿ

**ಮುಂಬೈ:** ನಾಸಿಕ್ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಮಹಾರಾಷ್ಟ್ರ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಶಿವಸೇನೆ (ಶಿಂದೆ ಬಣದ) ಅಧಿಕೃತ ಅಭ್ಯರ್ಥಿ ನರೇಂದ್ರ ದರಾಡೆ ಅವರನ್ನು ಬಿಜೆಪಿಯ ಬಂಡಾಯ ಅಭ್ಯರ್ಥಿ ಗೋಕುಲ್ ಗೀತೆ ಮಣಿಸಿದ್ದಾರೆ.

ಮೇಲ್ಮನೆಯ 11 ಕ್ಷೇತ್ರಗಳಿಗೆ ಜೂ.18ರಂದು ಮತದಾನ ನಡೆದಿತ್ತು. ಸೋಮವಾರ ನಡೆದ ಮತ ಎಣಿಕೆಯಲ್ಲಿ ಗೋಕುಲ್ ಅವರು 357 ಮತ ಪಡೆದಿದ್ದು, ನರೇಂದ್ರ ಅವರು 248 ಮತಗಳನ್ನಷ್ಟೇ ಪಡೆದು 109 ಮತಗಳಿಂದ ಸೋಲು ಅನುಭವಿಸಿದ್ದಾರೆಂದು ಚುನಾವಣಾಧಿಕಾರಿ ತಿಳಿಸಿದ್ದಾರೆ.

ಗೀತೆ ಅವರ ಗೆಲುವು ರಾಜ್ಯ ರಾಜಕಾರಣದಲ್ಲಿ ಅಚ್ಚರಿ ಮೂಡಿಸಿದೆ. ಮೈತ್ರಿ ಸರ್ಕಾರದ ಅಭ್ಯರ್ಥಿ ಪ್ರಬಲ ಸ್ಪರ್ಧೆಯೊಡ್ಡಬಹುದೆಂಬ ನಿರೀಕ್ಷೆಯು ಹುಸಿಯಾಗಿದೆ.

ನರೇಂದ್ರ ದರಾಡೆ ಅವರು ಏಕನಾಥ ಶಿಂದೆ ಅವರ ಬಣದಲ್ಲಿ ಗುರುತಿಸಿಕೊಂಡಿದ್ದಾರೆ. ಶಿವಸೇನೆ (ಉದ್ಧವ್ ಬಣ)ದ ಆರು ಮಂದಿ



ಲೋಕಸಭಾ ಸದಸ್ಯರು ಬಂಡಾಯವೆದ್ದು, ಶಿಂದೆ ಬಣಕ್ಕೆ ಸೇರಿದ್ದಾರೆ. ಅದರ ಮಧ್ಯೆಯೇ ಈ ಬೆಳವಣಿಗೆ ನಡೆದಿದೆ. ಈ ಚುನಾವಣೆಯಲ್ಲಿ ಗೆಲ್ಲಲೇಬೇಕೆಂದು ಏಕನಾಥ ಶಿಂದೆ ಹಾಗು ಪಕ್ಷದ ಹಲವು ಶಾಸಕರು ವ್ಯಾಪಕ ಪ್ರಚಾರ ನಡೆಸಿದ್ದರು.

ಫಲಿತಾಂಶದ ಕುರಿತಂತೆ ವಿಧಾನ ಪರಿಷತ್‌ನ ಶಿವಸೇನೆಯ ಸದಸ್ಯ ಮನೀಶಾ ಕಯಾಂಡೆ ಕೂಡ ಅನುಮಾನ ವ್ಯಕ್ತಪಡಿಸಿದ್ದಾರೆ. ನಮ್ಮ ಅಭ್ಯರ್ಥಿಯನ್ನು ಮೈತ್ರಿ ನಾಯಕರು ಪೂರ್ಣವಾಗಿ ಬೆಂಬಲಿಸಿದ್ದರೂ ಕೂಡ ಗೋಕುಲ್ ಗೆಲುವು ಸಾಧಿಸಿರುವುದು ಅನುಮಾನ ಮೂಡಿಸಿದೆ ಎಂದು ಫಲಿತಾಂಶದ ಬಳಿಕ ಅಸಮಾಧಾನ ವ್ಯಕ್ತಪಡಿಸಿದರು.

ಗೋಕುಲ್ ಗೀತೆ ಅವರು ಬಿಜೆಪಿಯ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಹಾಗು ಸಚಿವ ಗಿರೀಶ್ ಮಹಾಜನ್ ಅವರು ನಾಮಪತ್ರ ಹಿಂತೆಗೆಯುವಂತೆ ಮನವೊಲಿಸಿದ್ದರು.

ನಾಮಪತ್ರ ಹಿಂತೆಗೆಯುವ ಅವಧಿ ಮುಗಿದಿದ್ದರಿಂದ, ಮತ ಪತ್ರದಲ್ಲಿ ಅವರ ಹೆಸರು ಉಳಿದಿತ್ತು. ಆದರೆ, ತಮ್ಮ ಪರವಾಗಿ ಪ್ರಚಾರವನ್ನು ಸ್ಥಗಿತಗೊಳಿಸಿದ್ದರು. ಹೀಗಿದ್ದರೂ ಗೆಲುವು ಪಡೆದು, ಆಡಳಿತರೂಢ ಮಿತ್ರಪಕ್ಷಗಳಿಗೆ ಆಘಾತ ನೀಡಿದ್ದಾರೆ.

# ರೈತರ ಆತ್ಮಹತ್ಯೆ ಪರಿಹಾರ: ಪ್ರಚಾರ ಬೇಡ

• ಪ್ರಜೋದಯ ವರದಿ

**ಸಕಲೇಶಪುರ:** ರೈತರ ಆತ್ಮಹತ್ಯೆ ಪರಿಹಾರ ಯೋಜನೆಯನ್ನು ಪ್ರಚಾರಾತ್ಮಕ ಯೋಜನೆಯಾಗಿ ಪರಿಗಣಿಸದೆ, ಸಂಕಷ್ಟದಲ್ಲಿರುವ ರೈತ ಕುಟುಂಬಗಳಿಗೆ ಆರ್ಥಿಕ ನೆರವು ಹಾಗೂ ಆತ್ಮಸ್ಥೈರ್ಯ ತುಂಬುವ ಉದ್ದೇಶದಿಂದ ಸರ್ಕಾರ ಜಾರಿಗೊಳಿಸಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಕೃಷಿ ಇಲಾಖೆ ಆವರಣದಲ್ಲಿ ವಿವಿಧ ಫಲಾನುಭವಿಗಳಿಗೆ ಚೆಕ್ ವಿತರಿಸಿ ಮಾತನಾಡಿದ ಅವರು, ರೈತರ ಆತ್ಮಹತ್ಯೆ, ಆಕಸ್ಮಿಕ ಮರಣ ಹಾಗೂ ಬಣವೆ ನಷ್ಟ ಯೋಜನೆಗಳಡಿ ಸಂತ್ರಸ್ತ ಕುಟುಂಬಗಳಿಗೆ ಪರಿಹಾರಧನ ವಿಳಂಬವಾಗದಂತೆ ತಲುಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಮೃತ ರೈತರ ವಾರಸುದಾರರು ಸಲ್ಲಿಸಬೇಕಾದ ದಾಖಲಾತಿಗಳ ಕುರಿತು ಸ್ಪಷ್ಟ ಮಾಹಿತಿ ನೀಡುವ ಜೊತೆಗೆ, ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನು ಇನ್ನಷ್ಟು ಸರಳಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆಂದು ಹೇಳಿದರು.

ಸಭೆಯಲ್ಲಿ ಯಸಳೂರು ಹೋಬಳಿಯ ಸಂತಹಳ್ಳಿ ಗ್ರಾಮದ ಎಸ್.ಜಿ.ದಿವಾಕರ (ಗುಂಡಪ್ಪ ಅವರ ಪುತ್ರ) ಹಾಗೂ ಗೊದ್ದು ಗ್ರಾಮದ ಬಿ.ಕೆ.ತಿಪ್ಪೇಗೌಡ (ಕಾವೇರಿಗೌಡ ಅವರ ಪುತ್ರ) ಅವರ ರೈತರ ಆತ್ಮಹತ್ಯೆ ಪ್ರಕರಣಗಳನ್ನು ಪರಿಶೀಲಿಸಿ, ಅರ್ಹ ಪ್ರಕರಣಗಳಿಗೆ ಸರ್ಕಾರದ ನಿಯಮಾನುಸಾರ ಪರಿಹಾರ ಮಂಜೂರು ಮಾಡಲು ಶಿಫಾರಸು ಮಾಡುವ ತೀರ್ಮಾನ ಕೈಗೊಳ್ಳಲಾಯಿತೆಂದು ತಿಳಿಸಿದರು.

ರೈತರ ಆಕಸ್ಮಿಕ ಮರಣ ಪ್ರಕರಣಗಳಾದ ಯಸಳೂರು ಹೋಬಳಿಯ ಕರಗೂರು ಗ್ರಾಮದ



ಕೆ.ಎನ್.ಪ್ರಕಾಶ್ (ನಂಜೇಗೌಡ ಅವರ ಪುತ್ರ) ಹಾಗೂ ಹಾನುಬಾಳು ಹೋಬಳಿಯ ಚಿಗನಹಳ್ಳಿ ಗ್ರಾಮದ ನಂಜಯ್ಯ (ಕರಿಯಯ್ಯ ಅವರ ಪುತ್ರ) ಅವರ ಕುಟುಂಬಗಳಿಗೆ ತಲಾ 2 ಲಕ್ಷ ಪರಿಹಾರ ಮಂಜೂರಾತಿಗೆ ಮುಂದಿನ ಕ್ರಮ ಕೈಗೊಳ್ಳಲು ಸಭೆಯಲ್ಲಿ ಅನುಮೋದನೆ ನೀಡಲಾಯಿತು ಎಂದರು.

ಸಂತ್ರಸ್ತ ಕುಟುಂಬಗಳಿಗೆ ಪರಿಹಾರಧನ ವಿತರಣೆಯಲ್ಲಿ ಯಾವುದೇ ವಿಳಂಬವಾಗದಂತೆ ಅಗತ್ಯ ದಾಖಲೆಗಳನ್ನು ತ್ವರಿತವಾಗಿ ಸಂಗ್ರಹಿಸಿ, ಪ್ರಕರಣಗಳ ವಿಲೇವಾರಿಯನ್ನು ವೇಗಗೊಳಿಸು ವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಕುಣಿಗನಹಳ್ಳಿ ಗ್ರಾಮ ಪಂಚಾಯಿತಿ ಸ್ವಂತ ಸಂಪನ್ಮೂಲದ ಶೇ.25ರ ಅನುದಾನದಡಿ ಶವ ಸಂಸ್ಕಾರ ನೆರವು ಹಾಗೂ ಇಬ್ಬರು ನರ್ಸಿಂಗ್ ವಿದ್ಯಾರ್ಥಿಗಳು ಮತ್ತು ಒಬ್ಬ ಎಂ.ಎ. ವಿದ್ಯಾರ್ಥಿಗೆ ಶೈಕ್ಷಣಿಕ ಆರ್ಥಿಕ ನೆರವು ನೀಡಲಾಗಿದೆ ಎಂದು ಮಾಹಿತಿ ನೀಡಲಾಯಿತು.

ಸಕಲೇಶಪುರ ಉಪವಿಭಾಗದ ಕೃಷಿ ಉಪನಿರ್ದೇಶಕ ಪ್ರಭಾಕರ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರಕಾಶ್, ಕುಣಿಗನಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗಿರೀಶ್, ತೋಟಗಾರಿಕೆ ಇಲಾಖೆ ಸಹಾಯಕ ಅಧಿಕಾರಿ ಮನು, ಕೃಷಿ ಪರಿಕರಗಳ ಮಾರಾಟ ಸಂಘದ ಮಾಜಿ ಅಧ್ಯಕ್ಷ ಸಹನಾ ಶಶಿಧರ್, ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಹಾಗೂ ರೈತರು ಉಪಸ್ಥಿತರಿದ್ದರು.

## ಪ್ರತ್ಯೇಕ ಅಪಘಾತ: ಇಬ್ಬರ ಸಾವು

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ನುಗ್ಗೇಹಳ್ಳಿ ಹಾಗು ಆಲೂರು ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟು, ಐವರು ಗಾಯಗೊಂಡಿರುವ ಘಟನೆ ನಡೆದಿದೆ.

ಟ್ರ್ಯಾಕ್ಟರ್ ಡಿಕ್ಕಿಯಾಗಿ ಬೈಕ್ ಹಿಂಬದಿ ಕುಳಿತಿದ್ದ ಮಹಿಳೆ ಅಸುನೀಗಿರುವ ಘಟನೆ ಚನ್ನರಾಯ ಪಟ್ಟಣ ತಾಲ್ಲೂಕು ಹುಲಿಕೆರೆ-ಗೌಡಗೆರೆ ಮಾರ್ಗಮಧ್ಯೆ ನಡೆದಿದೆ. ಹಿರೀಸಾವೆ ಹೋಬಳಿ ಮದಲಗೆರೆ ಗ್ರಾಮದ ರತ್ನಮ್ಮ(68) ಮೃತರು. ಪುತ್ರ ಗಂಗಾಧರ್ ಜೊತೆಗೆ ತೆಂಕನಹಳ್ಳಿಗೆ ತೆರಳಿದ್ದ ಅವರು ಸಂಜೆ 6 ಗಂಟೆ ವೇಳೆ ವಾಪಾಸ್ ಬರುತ್ತಿ ದ್ದಾಗ ಅಪಘಾತ ಸಂಭವಿಸಿದೆ. ನುಗ್ಗೇಹಳ್ಳಿ ಕಡೆಯಿಂದ ವೇಗವಾಗಿ ಬಂದ ಟ್ರ್ಯಾಕ್ಟರ್ ಚಾಲಕ ಏಕಾಏಕಿ ಬೈಕ್‌ಗೆ ಡಿಕ್ಕಿ ಮಾಡಿ ದ್ದಾನೆ. ಬೈಕ್ ಸಮೇತ ಗಂಗಾಧರ್ ಹಾಗು ರತ್ನಮ್ಮ ಕೆಳಗೆ ಬಿದ್ದಿದ್ದು ತಲೆಗೆ ಬಲವಾದ ಪೆಟ್ಟು ಬಿದ್ದಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ನುಗ್ಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಲಾರಿ ಡಿಕ್ಕಿಯಾಗಿ ಕಾರು ಚಾಲಕ ಮೃತಪಟ್ಟು ಐವರು ಪ್ರಯಾಣಿಕರು ಗಾಯಗೊಂಡಿರುವ ಘಟನೆ ಆಲೂರು ತಾಲ್ಲೂಕಿನ ಪಾಳ್ಯ-ಕಣದಹಳ್ಳಿ ಮಾರ್ಗಮಧ್ಯೆ ನಡೆದಿದೆ.

ಬೆಂಗಳೂರಿನ ಕೃಷ್ಣ ಚೈತನ್ಯ (33)ಮೃತರು. ಪತ್ನಿ ಶ್ರೀಲಕ್ಷ್ಮಿ, ಮಗ ಚಾರ್ವಿಕ್ ಶ್ರೀಯಾನ್ಸ್, ಕೃಷ್ಣ ಚೈತನ್ಯ ಅವರ ಸಹೋದರಿ ಲಲಿತ ಹಾಗು ವಿಶ್ವಾಸ್, ಹನ್ವಿಕಾ ಗಾಯಾಳುಗಳು. ಭಾನುವಾರ ಧರ್ಮಸ್ಥಳದಿಂದ ಬೆಂಗಳೂರಿಗೆ ಹೊರಟಿದ್ದಾಗ ಮುಂದೆ ಹೊರಟಿದ್ದ ಲಾರಿ ಚಾಲಕ ಯಾವುದೇ ಸೂಚನೆ ನೀಡದೆ ಏಕಾಏಕಿ ರಸ್ತೆ ಮಧ್ಯೆ ನಿಲ್ಲಿಸಿದ್ದರಿಂದ ಹಿಂದಿನಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಕಾರು ಸಂಪೂರ್ಣ ಜಖಂಗೊಂಡಿದೆ. ಕೃಷ್ಣ ಚೈತನ್ಯ ಅವರು ಮೃತಪಟ್ಟಿದ್ದು, ಉಳಿದವರಿಗೆ ಹಿಮ್ಸ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮೃತ ಗುತ್ತಿಗೆದಾರರ ಕುಟುಂಬಕ್ಕೆ 10 ಲ. ರೂ.



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಅನಾರೋಗ್ಯ ಮತ್ತಿತರ ಕಾರಣಗಳಿಂದ ಗುತ್ತಿಗೆದಾರರು ಮೃತರಾದರೆ ಅವರ ಕುಟುಂಬಕ್ಕೆ 10 ಲ. ರೂ. ನೀಡಲಾಗುತ್ತಿದೆ ಎಂದು ಗುತ್ತಿಗೆದಾರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಎಸ್.ಬಿ.ಜಗದೀಶ್ ಅವರು ತಿಳಿಸಿದರು.

ಪಟ್ಟಣದ ಗುತ್ತಿಗೆದಾರರ ಸಂಘದ ಕಚೇರಿಯಲ್ಲಿ ಇತ್ತೀಚೆಗೆ ನಿಧನರಾದ ಉಲ್ಲೇನಹಳ್ಳಿ ಗ್ರಾಮದ ಪ್ರಥಮ ದರ್ಜೆ ಗುತ್ತಿಗೆದಾರ ಧರ್ಮಪ್ಪ ಕುಟುಂಬಸ್ಥರಿಗೆ 10 ಲ.ರೂ. ಆದೇಶ ಪತ್ರ ನೀಡಿ ಅವರು ಮಾತನಾಡಿ, ಮೊದಲು ಗುತ್ತಿಗೆದಾರರ ಕ್ಷೇಮನಿಧಿ 5 ಲಕ್ಷ ರೂ. ಇತ್ತು. ಆರ್. ಮಂಜುನಾಥ್ ರಾಜ್ಯಾಧ್ಯಕ್ಷರಾದ ಮೇಲೆ ಸರ್ಕಾರಕ್ಕೆ ಒತ್ತಡ ಹಾಕಿ 10 ಲ.ರೂ.ಗೆ ಹೆಚ್ಚಳ ಮಾಡಿದ್ದಾರೆಂದರು.

ತಾಲ್ಲೂಕಿನಲ್ಲಿ ನಾಲ್ಕು ತಿಂಗಳ ಹಿಂದೆ ಶ್ರವಣಬೆಳಗೊಳದ ಮೂರನೇ ದರ್ಜೆ ಗುತ್ತಿಗೆದಾರ ಅಶೋಕ್ ಮೃತರಾಗಿದ್ದು ಅವರ ಪತ್ನಿ ಗಾಯತ್ರಿಗೆ 10 ಲ. ರೂ. ಕ್ಷೇಮನಿಧಿಯಿಂದ ಕೊಡಿಸಲಾಗಿದೆ.

ಜಿಲ್ಲೆಯಲ್ಲಿ ಸಾಕಷ್ಟು ವರ್ಷಗಳಿಂದ ಗುತ್ತಿಗೆದಾರರು ಸರ್ಕಾರದಿಂದ ಕಾಮಗಾರಿ ಪಡೆದು ಕೆಲಸ ಮಾಡಕೊಂಡು ಬಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕೆಲಸ ಇಲ್ಲದೆ ಇರುವುದರಿಂದ ತಮ್ಮ ಪರವಾನಗಿಯನ್ನು ನವೀಕರಣ ಮಾಡಿಸಿಲ್ಲ. ನಿರ್ಲಕ್ಷ್ಯ ಮಾಡದೆ ಪರವಾನಗಿ ನವೀಕರಣ ಮಾಡಿಸಿಕೊಳ್ಳಬೇಕು. 10 ವರ್ಷಕ್ಕೆ ಒಮ್ಮೆ ಮಾತ್ರ ನವೀಕರಣ ಮಾಡಲಾಗುತ್ತದೆ. ಹಾಗಾಗಿ ಗುತ್ತಿಗೆದಾರರು ಅಸಡ್ಡೆ ತೋರ ಬಾರದೆಂದರು.

ನಾವು ಬದುಕಿದ್ದ ವೇಳೆ ಸರ್ಕಾರದಿಂದ ಕಾಮಗಾರಿಯನ್ನು ಗುತ್ತಿಗೆ ಪಡೆದು ಜೀವನ ನಡೆಸುತ್ತೇವೆ. ನಮಗೆ ಅನಾಹುತ ಆದರೆ ಕುಟುಂಬಕ್ಕೆ ಆಸರೆ ಇರುವುದಿಲ್ಲ. ಗುತ್ತಿಗೆದಾರರ ಕ್ಷೇಮ ನಿಧಿಯಿಂದ ಬರುವ ಹಣದಿಂದ ಕುಟುಂಬಕ್ಕೆ ಸಾಕಷ್ಟು ಅನುಕೂಲ ಆಗುತ್ತದೆ. ಇದನ್ನು ಮನದಲ್ಲಿ ಇಟ್ಟುಕೊಳ್ಳಬೇಕೆಂದರು.

ಗುತ್ತಿಗೆದಾರರ ಸಂಘದ ಖಜಾಂಚಿ ಪಾಂಡು, ನಿರ್ದೇಶಕ ರಾಮಕೃಷ್ಣ, ಗುತ್ತಿಗೆದಾರ ಯತಿರಾಜ್, ಮೃತ ಗುತ್ತಿಗೆದಾರ ಧರ್ಮಪ್ಪ ಪುತ್ರ ರಮೇಶ್ ಉಪಸ್ಥಿತರಿದ್ದರು.

## ಪತ್ರಕರ್ತರ ಒಕ್ಕೂಟದ ರಾಷ್ಟ್ರೀಯ ಮಂಡಳಿ ಸದಸ್ಯರಿಗೆ ಅಭಿನಂದನೆ

• ಪ್ರಜೋದಯ ವರದಿ

**ಹಾಸನ:** ದೆಹಲಿಯ ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ರಾಷ್ಟ್ರೀಯ ಮಂಡಳಿ ಸದಸ್ಯರಾಗಿ ನೇಮಕವಾಗಿರುವ ಪತ್ರಕರ್ತರಾದ ರವಿ ನಾಕಲಗೂಡು, ಹೆತ್ತೂರು ನಾಗರಾಜ್ ಮತ್ತು ಟಿ.ಎ.ಶ್ರೀನಿಧಿ ಅವರನ್ನು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಸೋಮವಾರ ಅಭಿನಂದಿಸಲಾಯಿತು.

ರಾಜ್ಯ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಮಾತನಾಡಿ, ದೇಶದ ನಾನಾ ಭಾಗಗಳಲ್ಲಿ ನಡೆಯುವ ಪತ್ರಕರ್ತರ ಸಮ್ಮೇಳನಗಳಲ್ಲಿ ಭಾಗವಹಿಸುವ ಮೂಲಕ ಹೊರ ರಾಜ್ಯಗಳಲ್ಲಿನ ಪತ್ರಿಕೋದ್ಯಮವನ್ನು ಅರಿಯಲು ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟ ವೇದಿಕೆ ಕಲ್ಪಿಸಿಕೊಡುತ್ತದೆ. ಪತ್ರಕರ್ತರ ಸಮಸ್ಯೆಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರ ಪಡಿಸಲು ಅನುಕೂಲವಾಗುತ್ತದೆ. ಒಕ್ಕೂಟದ ಮಹಾ ಪ್ರಧಾನ ಕಾರ್ಯದರ್ಶಿ ಪರಮಾನಂದ ಪಾಂಡೆ ಹಾಗು ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ ಅವರ ನೇತೃತ್ವದಲ್ಲಿ ಒಕ್ಕೂಟವು ಹತ್ತು ಹಲವು ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಿದೆ. ಸಂಘಟನೆ ಬಲಪಡಿಸಲು ಇದು ಒಳ್ಳೆಯ ಅವಕಾಶ. ರಾಷ್ಟ್ರೀಯ ಮಂಡಳಿ ಸದಸ್ಯರಾಗಿ ಆಯ್ಕೆಯಾಗಿ



ರುವ ಜಿಲ್ಲೆಯ ಮೂವರು ಪತ್ರಕರ್ತರು ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಪತ್ರಿಕಾ ಕ್ಷೇತ್ರಕ್ಕೆ ಕೀರ್ತಿ ತರಬೇಕೆಂದು ಆಶಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, ಕಾರ್ಯನಿರತ ಪತ್ರಕರ್ತರ ಸಂಘದ ಮಹತ್ವದ ಸ್ಥಾನಗಳಲ್ಲಿ ಹಾಸನ ಜಿಲ್ಲೆಯವರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಹೆಮ್ಮೆಯ ಸಂಗತಿ. ಪತ್ರಕರ್ತ ರವಿ ನಾಕಲಗೂಡು ಅವರನ್ನು ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಮಾಡಬೇಕಿತ್ತಾದರೂ ಅನಿವಾರ್ಯ ಕಾರಣಗಳಿಂದ ಸಾಧ್ಯವಾಗಿರಲಿಲ್ಲ. ಅದೇ ರೀತಿ ನಾಗರಾಜ್ ಹೆತ್ತೂರು ಅವರು ಸಂಘದ ಚುನಾವಣೆಯಲ್ಲಿ ಸೋಲನ್ನು ಅನುಭವಿಸಿದ್ದರಿಂದ ಅವರಿಗೆ ಸ್ಥಾನಮಾನ ಕಲ್ಪಿಸುವುದು ನಮ್ಮ ಜವಾಬ್ದಾರಿ ಆಗಿತ್ತು. ಜೊತೆಗೆ ತೋ.ಚ.ಅನಂತಸುಬ್ಬರಾಯ ಅವರ ಪುತ್ರ ಶ್ರೀನಿಧಿ ಅವರನ್ನು ರಾಷ್ಟ್ರೀಯ ಮಂಡಳಿ ಸದಸ್ಯರನ್ನಾಗಿ ನೇಮಿಸುವ ಮೂಲಕ ನಮ್ಮ ಸಂಘ ಎಲ್ಲರಿಗೂ ಸ್ಥಾನಮಾನ ಕಲ್ಪಿಸುತ್ತಿದೆ. ಮುಂದೆಯೂ ಇದೇ ರೀತಿ ಸೌಹಾರ್ದತೆಯಿಂದ ಪತ್ರಕರ್ತರ ಹಿತ ಕಾಯುವ ಕೆಲಸ ಮಾಡುತ್ತೇವೆಂದರು.

ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ರಾಷ್ಟ್ರೀಯ ಮಂಡಳಿ ಸದಸ್ಯರಾಗಿ ಆಯ್ಕೆಯಾಗಿರುವ ಮೂವರು ಪತ್ರಕರ್ತರು ಮಾತನಾಡಿದರು. ಜಿಲ್ಲಾ ಸಂಘದ ಮಾಜಿ ಅಧ್ಯಕ್ಷ ಬಾಳ್ಳು ಗೋಪಾಲ್, ಕಾರ್ಯದರ್ಶಿಗಳಾದ ಖುಷ್ವಂತ್, ಕೆ.ಎಂ.ಹರೀಶ್ ಮಾತನಾಡಿ, ಮೂವರ ಆಯ್ಕೆಗೆ ಸಂತೋಷ ವ್ಯಕ್ತಪಡಿಸಿ ಉತ್ತಮ ಕೆಲಸ ಮಾಡಿ ಎಂದು ಅಭಿನಂದನೆ ಹೇಳಿದರು.

ಪ್ರಧಾನ ಕಾರ್ಯದರ್ಶಿ ಕೆ.ಜಿ. ಸುರೇಶ್ ಸ್ವಾಗತಿಸಿದರು. ಖಜಾಂಚಿ ಪ್ರಕಾಶ್ ಬೆಳವಾಡಿ, ಉಪಾಧ್ಯಕ್ಷ ಜಿ.ಪ್ರಕಾಶ್ ಮತ್ತಿತರರಿದ್ದರು.

## ವಿಶ್ವಾಸ ದ್ರೋಹ: ಬಿಜೆಪಿಯಲಿ ಕಂಪನ

» ಮೊದಲನೇ ಪುಟದಿಂದ

ಧರ್ಮಸ್ಥಳದಲ್ಲಿ ಶಾಸಕಾಂಗ ಸಭೆ ನಡೆಸುವ ವಿಚಾರದ ಕುರಿತು ಆಕ್ಷೇಪವನ್ನು ಭಾನುವಾರವೇ ವ್ಯಕ್ತಪಡಿಸಿದ್ದರಲ್ಲದೆ, ಮಾಜಿ ಸಚಿವ ಶ್ರೀರಾಮುಲು ಕೂಡ ಅಂತಹ ಸಭೆಯ ಅಗತ್ಯವಿಲ್ಲವೆಂದು ಪ್ರತಿಪಾದಿಸಿದ್ದಾರೆ.

**ಕಾಂಗ್ರೆಸ್‌ನಿಂದ ಬಂದವರಿಂದ ಬಿಜೆಪಿ ಹಾಳು**

ಶಿವಮೊಗ್ಗಾದಲ್ಲಿ ಮಾತನಾಡಿದ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರು, ಈ ಹಿಂದೆ ದುಡ್ಡು ಕೊಟ್ಟು ಕರೆತಂದ 17 ಕಾಂಗ್ರೆಸ್ ಶಾಸಕರಿಂದಲೇ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿತ್ತು. ಆದರೆ ನಂತರ ಅವರಿಂದಲೇ ಪಕ್ಷ ಹಾಳಾಯ್ತು. ಕಾಂಗ್ರೆಸ್‌ಗೂ ಅದೇ ಪರಿಸ್ಥಿತಿ ಬರಲಿದೆ ಎಂದು ಭವಿಷ್ಯ ನುಡಿದರು.

ಕರ್ನಾಟಕದಲ್ಲಿ ವಿಧಾನ ಪರಿಷತ್ ಸದಸ್ಯರನ್ನು ಖರೀದಿ ಮಾಡುವ ಕೆಲಸ ನಡೆದಿದೆ. ಅದರಲ್ಲಿ ಎಷ್ಟು ಭ್ರಷ್ಟಾಚಾರ ನಡೆದಿದೆ. ಧರ್ಮಸ್ಥಳ ಪವಿತ್ರ ಸ್ಥಳ, ಅಲ್ಲಿ ಆಣೆ ಪ್ರಮಾಣ ಬೇಡ. ವಿಜಯೇಂದ್ರ ಅವರು ತಕ್ಷಣ ತಮ್ಮ ನಿಲುವನ್ನ ಹಿಂಪಡೆಯಬೇಕು. ಭಕ್ತಿಯನ್ನು ಒರೆ ಹಚ್ಚುವುದಲ್ಲ, ಹಾಗಾಗಿ ಈ ನಿರ್ಧಾರ ಕೈಬಿಡಬೇಕು. ಧರ್ಮಸ್ಥಳದಲ್ಲಿ ಆಣೆ ಪ್ರಮಾಣ ಮಾಡಿ ಅಣ್ಣಪ್ಪನ ಬಳಿ ಕ್ಷಮೆ ಕೇಳುತ್ತಾರೆ. ಈ ಪದ್ಧತಿ ಒಳ್ಳೆಯದಲ್ಲ ಎಂದರು.

## ಜೂ.27ಕ್ಕೆ 6ನೇ ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆ




• ಪ್ರಜೋದಯ ವರದಿ

**ಹಾಸನ:** ವಿಶ್ವ ಯೋಗ ದಿನಾಚರಣೆ ಅಂಗವಾಗಿ ಜಿಲ್ಲಾ ಯೋಗ ಸಂಸ್ಥೆಯಿಂದ ಜೂ.27 ರಂದು ನಗರದ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಸಂಸ್ಥೆ ಪ್ರಧಾನ ಕಾರ್ಯದರ್ಶಿ ಜೆ.ಐ.ನಿರಂಜನರಾಜ್ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಬೆಳಿಗ್ಗೆ 8ರಿಂದ ಸ್ಪರ್ಧೆ ನಡೆಯಲಿದೆ. 8-12 ವರ್ಷದ ಬಾಲಕ-ಬಾಲಕಿಯರು, 12-15 ವರ್ಷ, 15-17 ವರ್ಷ, 17-20 ವರ್ಷ ದೊಳಗಿನ ಬಾಲಕ-ಬಾಲಕಿಯರು, 20-30 ವರ್ಷದ ಪುರುಷ-ಮಹಿಳೆಯರು, 30-40 ವರ್ಷ ಹಾಗು 40 ವರ್ಷ ಮೇಲ್ಪಟ್ಟ ಪುರುಷ ಹಾಗು ಮಹಿಳೆಯರು ಭಾಗಿಯಾಗಬಹುದು ಎಂದರು.

ಪಶ್ಚಿಮೋತ್ತಾನಾಸನ, ವೃಕ್ಷಾಸನ, ಗಡುಡಾಸನ, ಮರೀಚಾಸನ, ಪರಿವೃತ್ತ ತ್ರಿಕೋನಾಸನ, ಪೂರ್ವೋತ್ತಾನಸನ, ಅರ್ಕರ್ಣ ಧನುರಾಸನ ಮತ್ತು ಊರ್ಧ್ವ ಧನುರಾಸನ ಇರಲಿದೆ. ಮೇಲೆ ಸೂಚಿಸಿರುವ ಆಸನಗಳಲ್ಲಿ 3 ಆಸನಗಳನ್ನು ಲಾಟರಿ ಮೂಲಕ ಕಡ್ಡಾಯವಾಗಿ ಮಾಡುವುದು ನಂತರ ತಮಗೆ ಇಷ್ಟವಿರುವ 2 ಆಸನ ಸೇರಿ ಒಟ್ಟು 5 ಆಸನ ಮಾಡಬೇಕು. ಹೆಚ್ಚಿನ ವಿವರಗಳಿಗೆ ಪ್ರತಿದಿನ ಸಂಜೆ 4 ರಿಂದ 5 ಗಂಟೆ ವರೆಗೆ ನಗರದ ಮಹಾರಾಜ ಪಾರ್ಕ್ ನಲ್ಲಿರುವ ಹೆಲ್ತ್ ಜಿಮ್‌ನಲ್ಲಿ ಜೆ.ಐ. ನಿರಂಜನ್ ರಾಜ್-9900839475, ಕೃಷ್ಣಪ್ಪ ವಿ.9448006300, ಮನೋಹರ್- 7892886735 ಇಲ್ಲಿಗೆ ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಗಣೇಶ್, ಭಾನುಮತಿ, ಮಹೋಹರ್, ನಾಗರಾಜ್ ಇದ್ದರು.

# ಯೋಗ-ಆಧ್ಯಾತ್ಮ ಭಾರತದ ಶ್ರೇಷ್ಠ ಕೊಡುಗೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಭಾರತವು ವಿಶ್ವಕ್ಕೆ ನೀಡಿರುವ ಅತ್ಯಮೂಲ್ಯ ಮತ್ತು ಶಾಶ್ವತ ಕೊಡುಗೆಗ ಳೆಂದರೆ ಯೋಗ ಮತ್ತು ಆಧ್ಯಾತ್ಮ ಎಂದು ತಾಲ್ಲೂಕು ಕಾನೂನು ಸೇವೆಗಳ ಸಮಿತಿ ಅಧ್ಯಕ್ಷೆ ಎಂ.ಎಸ್.ಕಲ್ಪನಾ ಅವರು ಹೇಳಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ತಾಲ್ಲೂಕು ಕಾನೂನು ಸೇವೆಗಳ ಸಮಿತಿ ಹಾಗು ಪೂರ್ಣಚಂದ್ರ ಪಬ್ಲಿಕ್ ಶಾಲೆಯಿಂದ ನಡೆದ ಅಂತಾರ್ರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಯೋಗ ಮತ್ತು ಆಧ್ಯಾತ್ಮ ಕೇವಲ ಭಾರತದ ಸಾಂಸ್ಕೃತಿಕ ಪರಂಪರೆ ಮಾತ್ರವಲ್ಲದೆ ಇಡೀ ಮಾನವಕುಲದ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯಕ್ಕೆ ಭಾರತ ನೀಡಿರುವ ದಾರಿದೀಪ ಎಂದರು.

ಯೋಗವು ಕೇವಲ ವ್ಯಾಯಾಮವಲ್ಲ, ಅದು ದೇಹ, ಮನಸ್ಸು ಮತ್ತು ಆತ್ಮದ ನಡುವೆ ಸಮತೋಲನ ಕಾಪಾಡುವ ಅದ್ಭುತ ಸಾಧನ. ಭಾರತದ ಯೋಗ ಸಂಸ್ಕೃತಿಗೆ




ಜಾಗತಿಕ ಮನ್ನಣೆ ಸಿಕ್ಕಿದ್ದು, ವಿಶ್ವ ಸಂಸ್ಥೆಯು ಜೂ.21 ಅನ್ನು ಅಂತಾರ್ರಾಷ್ಟ್ರೀಯ ಯೋಗ ದಿನವಾಗಿ ಘೋಷಿಸಿದೆ. 190ಕ್ಕೂ ಹೆಚ್ಚು ದೇಶಗಳು ಯೋಗ ದಿನ ಆಚರಿಸುತ್ತಿವೆ. ಒತ್ತಡದ ಜೀವನಕ್ಕೆ ಯೋಗ ಮತ್ತು ಪ್ರಾಣಾಯಾಮ ಅತ್ಯುತ್ತಮ ಪರಿಹಾರವಾಗಿದ್ದು, ಲಕ್ಷಾಂತರ ಜನರಿಗೆ ದೈಹಿಕ ಮತ್ತು ಮಾನಸಿಕ ನೆಮ್ಮದಿ ನೀಡುತ್ತಿವೆ ಎಂದು ತಿಳಿಸಿದರು.

ಶ್ರೀದೇವಿ ಸಮೂಹ ವಿದ್ಯಾ ಸಂಸ್ಥೆಗಳ ಅಧ್ಯಕ್ಷ ಸಿ.ಕೆ.ವಿಜಯ ಕುಮಾರ್ ಅವರು ಮಾತನಾಡಿ, ನಿಯಮಿತ ಯೋಗಾಭ್ಯಾಸವು ದೈಹಿಕ ಹಾಗು ಮಾನಸಿಕ ಆರೋಗ್ಯವನ್ನು ಸುಧಾರಿಸುತ್ತದೆ. ಸ್ನಾಯುಗಳನ್ನು ಬಲಪಡಿಸುತ್ತದೆ, ನಮ್ಯತೆಯನ್ನು ವೃದ್ಧಿಸುತ್ತದೆ ಮತ್ತು ದೇಹದ ಭಂಗಿಯನ್ನು ಸುಧಾರಿಸುತ್ತದೆ. ದೇಹದಲ್ಲಿನ ಒತ್ತಡದ ಹಾರ್ಮೋನ್ ಮಟ್ಟವನ್ನು ಕಡಿಮೆ ಮಾಡುವ ಮೂಲಕ ಮನಸ್ಸಿಗೆ ಶಾಂತಿ ನೀಡುತ್ತದೆಂದರು.

ರಕ್ತದೊತ್ತಡ ನಿಯಂತ್ರಿಸಿ, ಹೃದಯ ಬಡಿತವನ್ನು ಸ್ಥಿರಗೊಳಿಸುವುದರಿಂದ ಹೃದಯ ಸಂಬಂಧಿ ಖಾಯಿಲೆಗಳ ಅಪಾಯವನ್ನು ತಗ್ಗಿಸುತ್ತದೆ. ಪ್ರಾಣಾಯಾಮವು ಶ್ವಾಸಕೋಶದ ಸಾಮರ್ಥ್ಯ ಹೆಚ್ಚಿಸಿ, ದೇಹಕ್ಕೆ ಆಮ್ಲಜನಕದ ಪೂರೈಕೆ ಸುಗಮಗೊಳಿಸುತ್ತವೆ. ಮಾನಸಿಕ ನೆಮ್ಮದಿ ನೀಡುವ ಮೂಲಕ ಒಟ್ಟಾರೆ ಜೀವನದ ಗುಣಮಟ್ಟವನ್ನು ಉತ್ತಮಗೊಳಿಸುತ್ತದೆಂದು ತಿಳಿಸಿದರು.

ರಾಜ್ಯ ಮಟ್ಟದ ಯೋಗಪಟು ಕು. ವಿಸ್ಮಿತ ಅವರನ್ನು ಸನ್ಮಾನಿಸಲಾಯಿತು. ತಾಲ್ಲೂಕು ಕಾನೂನು ಸೇವೆಗಳ ಸಮಿತಿಯ ಕಾರ್ಯದರ್ಶಿ ವಿ. ಕುಸುಮ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಎ.ಅರುಣ ಕುಮಾರಿ, ಪೂರ್ಣಚಂದ್ರ ಪಬ್ಲಿಕ್ ಶಾಲೆಯ ಕಾರ್ಯದರ್ಶಿ ಆಶಾ ವಿಜಯ್ ಕುಮಾರ್, ಪ್ರಾಂಶುಪಾಲ ಮಂಜುನಾಥ್ ಜಕ್ಕಳ್ಳಿ, ಲಯನ್ಸ್ ಕ್ಲಬ್ ಅಧ್ಯಕ್ಷ ಗಿರೀಶ್, ಡಿ.ಕೆ. ಮಂಜುನಾಥ್, ರೋಟರಿ ಸಂಸ್ಥೆ ಅಧ್ಯಕ್ಷೆ ಜ್ಯೋತಿ ಶ್ರೀನಿವಾಸ್, ಇನ್ನರ್‌ವಿಲ್ ಕ್ಲಬ್ ಅಧ್ಯಕ್ಷೆ ನೇತ್ರ ನವೀನ್, ಅಗ್ನಿಶಾಮಕ ಠಾಣೆಯ ಅಧಿಕಾರಿ ವೆಂಕಟೇಶ್, ಸ್ನೇಹಮಯಿ ವಿವೇಕಾನಂದ ಯೋಗಾಶಾಲೆಯ ಮಂಜುನಾಥ್ ಅಡಗೂರು ಇದ್ದರು.

## ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಭ್ರಷ್ಟಾಚಾರ ಎಸಗಿಲ್ಲ

» ಮೊದಲನೇ ಪುಟದಿಂದ

ರೈತರನ್ನು ತಪ್ಪಿತಸ್ಥರಂತೆ ಬಿಂಬಿಸುವುದು ಸರಿಯಲ್ಲ. ಈ ಪ್ರಕರಣದಲ್ಲಿ ಸುಮಾರು ಎರಡೂವರೆ ಸಾವಿರ ರೈತರ ಭವಿಷ್ಯ ಅಡಗಿದೆ. ಲಿಂಗೇಶ್ ಅವರು ತಮ್ಮ ಕುಟುಂಬದವರು ಅಥವಾ ಬಂಧುಗಳಿಗಾಗಿ ಜಮೀನು ಮಂಜೂರು ಮಾಡಿಕೊಂಡಿಲ್ಲ. ಬದಲಾಗಿ ಅರ್ಹ ಬಡವರು, ಶೋಷಿತ ವರ್ಗಗಳಿಗೆ ಭೂಮಿ ದೊರಕಿಸುವ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ. ಪ್ರಕರಣ ಕುರಿತು ಪೊಲೀಸ್ ಬದಲು ಕಂದಾಯ ಇಲಾಖೆಯ ತಜ್ಞರು ಹಾಗು ನಿವೃತ್ತ ಸಹಾಯಕ ಆಯುಕ್ತರ ನೇತೃತ್ವದಲ್ಲಿ ಸಮಿತಿ ರಚಿಸಿ ದಾಖಲೆಗಳನ್ನು ಪರಿಶೀಲಿಸಿದರೆ ನಿಜಾಂಶ ಹೊರಬರಲಿದೆ ಎಂದು ಅಭಿಪ್ರಾಯಪಟ್ಟರು.

1991ರಿಂದ 2026ರ ವರೆಗೆ ಫಾರಂ ನಂಬರ್ 53ರಡಿ ಸಲ್ಲಿಸಿರುವ ಸಾವಿರಾರು ಅರ್ಜಿಗಳು ಬಾಕಿ ಉಳಿದಿವೆ. ಈ ಅವಧಿಯಲ್ಲಿ ಕಂದಾಯ ನಿಯಮಗಳು ಹಲವು ಬಾರಿ ಬದಲಾಗಿದ್ದು, ಅರ್ಜಿ ಸಲ್ಲಿಸಿದ ಸಂದರ್ಭದ ನಿಯಮ ಮತ್ತು ಮಂಜೂರು ಮಾಡುವ ಸಂದರ್ಭದ ನಿಯಮಗಳಲ್ಲಿ ವ್ಯತ್ಯಾಸ ಇರುವುದರಿಂದ ಗೊಂದಲ ಉಂಟಾಗಿದೆ ಎಂದರು.

**ರಾಜಕೀಯ ಪ್ರೇರಿತ ಆರೋಪ**

ಇಂದಿನ ನಿಯಮಗಳನ್ನೇ ಹಿಂದಿನ ಅವಧಿಗೂ ಅನ್ವಯಿಸಿ ತನಿಖೆ ನಡೆಸಿದರೆ 1998ರಿಂದ 2016ರ ವರೆಗೆ ಬೇಲೂರು ತಾಲ್ಲೂಕಿನಲ್ಲಿ ಭೂಮಿ ಮಂಜೂರು ಮಾಡಿದ ಎಲ್ಲರ ಮೇಲೂ ಪ್ರಶ್ನೆಗಳು ಎದುರಾಗುತ್ತವೆ. ಆದ್ದರಿಂದ ರಾಜಕೀಯ ಪ್ರೇರಿತ ಆರೋಪಗಳನ್ನು ಮಾಡದೆ, ನಿಜವಾದ ಫಲಾನುಭವಿ ರೈತರ ಹಿತ ಕಾಪಾಡಬೇಕು. ಲಿಂಗೇಶ್ ಅವರೊಂದಿಗೆ ರೈತ ಸಂಘಕ್ಕೆ ಯಾವುದೇ ರಾಜಕೀಯ ಸಂಬಂಧವಿಲ್ಲ. ರೈತರ ಪರವಾಗಿ ಹೋರಾಟ ನಡೆಸಿದ ನಾಯಕರಾಗಿದ್ದು, ಹಳೇಬೀಡು ನೀರಾವರಿ ಹೋರಾಟ ಸೇರಿ ಹಲವು ಜನಪರ ಹೋರಾಟಗಳಲ್ಲಿ ರೈತ ಸಂಘದೊಂದಿಗೆ ಕೈಜೋಡಿಸಿದ್ದಾರೆಂದರು.

ತಾಲ್ಲೂಕಿನ ಒಬ್ಬ ರೈತನಿಗೂ ಅನ್ಯಾಯವಾಗಬಾರದು. ಅರ್ಹ ಫಲಾನುಭವಿ ರೈತರಿಗೆ ತೊಂದರೆಯಾಗದಂತೆ ರೈತ ಸಂಘ ಹೋರಾಟ ನಡೆಸಲಿದೆ. ಅಗತ್ಯವಿದ್ದರೆ ನ್ಯಾಯಾಲಯದಲ್ಲಿಯೂ ರೈತರ ಪರವಾಗಿ ಹೋರಾಟ ಮುಂದುವರಿಸಲಾಗುವುದೆಂದು ತಿಳಿಸಿದರು.

ರೈತ ಸಂಘದ ಜಿಲ್ಲಾ ಗೌರವಾಧ್ಯಕ್ಷ ಮಲ್ಲಿಕಾರ್ಜುನ್, ಉಪಾಧ್ಯಕ್ಷ ಧರ್ಮೇಗೌಡ, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಸಚಿನ್ ಇದ್ದರು.

## ಆರೋಗ್ಯಯುತ ಬದುಕಿಗೆ ಯೋಗ ಸಹಕಾರಿ

**ಚನ್ನರಾಯಪಟ್ಟಣ:** ನಿತ್ಯ ಜೀವನದಲ್ಲಿ ಯೋಗ, ಧ್ಯಾನ ಹಾಗು ವ್ಯಾಯಾಮವನ್ನು ಅಳವಡಿಸಿಕೊಂಡರೆ ಆರೋಗ್ಯಯುತ ಬದುಕು ರೂಪಿಸಿಕೊಳ್ಳಬಹುದೆಂದು ಯೋಗ ಶಿಕ್ಷಕ ಸಿ.ಎನ್. ಅಶೋಕ್ ಅವರು ಹೇಳಿದರು.

ಪಟ್ಟಣದ ಶಾಲಿನಿ ಅಂತಾರಾಷ್ಟ್ರೀಯ ಶಾಲೆ ಹಾಗು ಸ್ವಾಮಿ ವಿವೇಕಾನಂದ ಯೋಗ ಶಾಲೆ ಆಯೋಜಿಸಿದ್ದ ವಿಶ್ವ ಯೋಗ ದಿನಾಚರಣೆಯಲ್ಲಿ ಮಾತನಾಡಿ, ಮನುಷ್ಯ ಖಾಯಿಲೆಗಳ ಗೂಡಾಗುತ್ತಿದ್ದಾನೆ. ಮಧುಮೇಹ, ರಕ್ತದೊತ್ತಡ, ಕ್ಯಾನ್ಸರ್, ಮೈಗ್ರೇನ್ ಸೇರಿ ಇನ್ನಿತರ ಖಾಯಿಲೆಗಳ ಸಂಗಡ ಬದುಕುವಂತಾಗಿದೆ. ಆಹಾರಕ್ಕಿಂತ ಔಷಧಿ ಮಾತ್ರೆಗಳೇ ಹೆಚ್ಚಾಗಿ ಸೇವಿಸುವ ಕಾಲ ಘಟ್ಟದಲ್ಲಿದ್ದೇವೆ. ಸಮಸ್ಯೆಗಳಿಂದ ಪಾರಾಗಬೇಕೆಂದೆ ನಿತ್ಯ ಯೋಗ ಮಾಡಬೇಕೆಂದರು. ಶಾಲಾ ಮುಖ್ಯಸ್ಥೆ ಜಯಮ್ಮ ನಂಜುಂಡೇಗೌಡ, ಸಿಇಒ ವಿವೇಕ ಅಶೋಕ್, ಮುಖ್ಯ ಶಿಕ್ಷಕಿ ದೀಪ್ತಿ ಸೋಫಿಯಾ, ಲತಾ ಪುಟ್ಟೇಗೌಡ, ಪದ್ಮಶ್ರೀ, ವೆಂಕಟೇಶ್‌ಮೂರ್ತಿ, ಮಂಗಳಗೌರಿ, ಜಯಶ್ರೀ ಇದ್ದರು.

## ಕಾಂಕ್ರೀಟ್ ರಸ್ತೆ: ಶಾಸಕರಿಗೆ ಧನ್ಯವಾದ



**ಹಾಸನ:** ಬೇಲೂರು ತಾಲ್ಲೂಕು ಮದಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಮಲ್ಲರಹೊಸಳ್ಳಿ ಗ್ರಾಮಕ್ಕೆ ಸಿಮೆಂಟ್ ರಸ್ತೆ ಮಾಡಿಕೊಟ್ಟಿರುವ ಸ್ಥಳೀಯ ಶಾಸಕ ಹೆಚ್.ಕೆ. ಸುರೇಶ್ ಅವರಿಗೆ ಗ್ರಾಮಸ್ಥರು ಧನ್ಯವಾದ ಹೇಳಿದ್ದಾರೆ.

ಮಲ್ಲರಹೊಸಳ್ಳಿ ಒಂದು ಕುಗ್ರಾಮವಾಗಿದ್ದು, ಇಲ್ಲಿ 800ಕ್ಕೂ ಹೆಚ್ಚು ಜನಸಂಖ್ಯೆ ಇದೆ. ಗ್ರಾಮದ ಮಕ್ಕಳು, ಮಹಿಳೆಯರು,ವಿದ್ಯಾಭ್ಯಾಸ ಮತ್ತಿತರ ಕೆಲಸ ಕಾರ್ಯಗಳಿಗೆ ಹೋಗಲು ಬಸ್‌ಗಾಗಿ ಮೂರು ಕಿ.ಮೀ ನಡೆದು ಹೋಗಬೇಕು. ಕೆಲ ದಿನಗಳ ಹಿಂದೆ ನಮ್ಮೂರಿಗೆ ಬಂದಿದ್ದ ಶಾಸಕರು, ಎತ್ತಿನಹೊಳೆ ಯೋಜನೆಯಿಂದ ಸುಮಾರು 3 ಕಿ.ಮೀ ಉದ್ದದ ಸುಸಜ್ಜಿತ ಕಾಂಕ್ರಿಟ್ ರಸ್ತೆ ಮಾಡಿಸಿಕೊಟ್ಟಿ ದ್ದಾರೆ. ಈ ಮೂಲಕ 25 ವರ್ಷದ ಬೇಡಿಕೆ ಈಡೇರಿಸಿದ್ದಾರೆಂದು ಕೃತಜ್ಞತೆ ಸಲ್ಲಿಸಿದ್ದಾರೆ.

ಅದರಿಂದ ಇಡೀ ಗ್ರಾಮದ ಜನರಿಗೆ ತುಂಬಾ ಅನುಕೂಲವಾಗಿದೆ. ಇದೇ ರೀತಿ ಗ್ರಾಮದ ಮುಂದಿನ ಕೆರೆ ಏರಿ ಅಗಲ ಆಗಿಲ್ಲದ ಕಾರಣ, ಬಸ್ ಸಂಚಾರವನ್ನು ಸ್ಥಗಿತಗೊಳಿಸಿದ್ದಾರೆ. ಅದಕ್ಕೂ ಶಾಸಕರು ಸ್ಪಂದಿಸಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನದೊಂದಿಗೆ ಕೆರೆ ಏರಿ ಅಗಲ ಮಾಡಿ ಬಸ್ ಸೌಕರ್ಯ ಮಾಡಿಕೊಡಲು ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದ್ದಾರೆಂದು ಗ್ರಾಮಸ್ಥರಾದ ಶಿವಣ್ಣ ಹೇಳಿದ್ದಾರೆ.

# ಕಾಡಾನೆ ಹಾವಳಿ ಪೀಡಿತ ಗ್ರಾಮಗಳಲ್ಲಿ ಮುನ್ನೆಚ್ಚರಿಕೆ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಕಾಡಾನೆಗಳ ಸಂಚಾರ ಹೆಚ್ಚಾಗಿರುವ ಹಿನ್ನಲೆಯಲ್ಲಿ ಸಾರ್ವಜನಿಕರು ಹಾಗೂ ಕಾಫಿ ತೋಟದ ಕಾರ್ಮಿಕರ ಸುರಕ್ಷತೆ ದೃಷ್ಟಿಯಿಂದ ಅರಣ್ಯ ಇಲಾಖೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ.

ಸಕಲೇಶಪುರ ವಲಯ ಅರಣ್ಯಾಧಿಕಾರಿ ಹೇಮಂತ್ ಕುಮಾರ್ ಅವರ ನೇತೃತ್ವದಲ್ಲಿ ಅರಣ್ಯ ಇಲಾಖೆ ಮತ್ತು ಎಲಿಫೆಂಟ್ ಟಾಸ್ಕ್ ಫೋರ್ಸ್ (ಇಟಿಎಫ್) ಸಿಬ್ಬಂದಿ ಮಾಗಡಿ, ಇಬ್ಬಡಿ ಹಾಗೂ ಶಾಂತಪುರ ಭಾಗಗಳಿಗೆ ಭೇಟಿ ನೀಡಿ ಸ್ಥಳೀಯರಿಗೆ ಕಾಡಾನೆಗಳ ಚಲನವಲನದ ಕುರಿತು ಜಾಗೃತಿ ಮೂಡಿಸಿದರು.

ಮಾಗಡಿ ಗ್ರಾಮದ ಸಚಿನ್ ಅವರ ತೋಟ ಹಾಗೂ ಮಾಗಡಿ ಎಸ್ಟೇಟ್ ಸುತ್ತಮುತ್ತ ಮೂರು ಕಾಡಾನೆಗಳು ಸಂಚರಿಸುತ್ತಿರುವ ಮಾಹಿತಿ ಹಿನ್ನಲೆಯಲ್ಲಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದರು. ಸಾರ್ವಜನಿಕರು ಮತ್ತು ತೋಟದ ಕಾರ್ಮಿಕರಿಗೆ ಕಾಡಾನೆಗಳ ಇರುವಿಕೆ ಕುರಿತು ಮಾಹಿತಿ ನೀಡಿದ ಅಧಿಕಾರಿಗಳು, ತೋಟಗಳಿಗೆ ತೆರಳುವ ಮುನ್ನ ಅರಣ್ಯ ಇಲಾಖೆಯ ಮಾಹಿತಿ ಪಡೆದು ಎಚ್ಚರಿಕೆಯಿಂದ ತೆರಳುವಂತೆ ಸೂಚಿಸಿದರು.

ಒಂಟಿ ಕಾಡಾನೆಗಳ ಚಲನವಲನದ ಮೇಲೆ ನಿರಂತರ ನಿಗಾ ವಹಿಸುವಂತೆ ಇಟಿಎಫ್ ಸಿಬ್ಬಂದಿಗೆ



ಸೂಚನೆ ನೀಡಲಾಗಿದೆ. ಕಾಡಾನೆಗಳ ಚಟುವಟಿಕೆಗಳ ಕುರಿತು ನಿರಂತರ ಮಾಹಿತಿ ಸಂಗ್ರಹಿಸಿ ಸಾರ್ವಜನಿಕರಿಗೆ ತಲುಪಿಸುವ ಕಾರ್ಯವನ್ನು ಇಲಾಖೆ ಮುಂದುವರಿಸಿದೆ.

ಬಳಿಕ ಇಬ್ಬಡಿಶಾಂತಪುರ ಗ್ರಾಮಗಳಿಗೆ ಭೇಟಿ ನೀಡಿದ ಅಧಿಕಾರಿಗಳು, ರಾಮಚಂದ್ರ ಅವರ ತೋಟದಲ್ಲಿ ಕೆಲಸ ಮಾಡುತ್ತಿದ್ದ ಸುಮಾರು 20 ಮಹಿಳಾ ಕೂಲಿ ಕಾರ್ಮಿಕರು ಹಾಗೂ ಗ್ರಾಮಸ್ಥ ರೊಂದಿಗೆ ಸಭೆ ನಡೆಸಿದರು. ಈ ವೇಳೆ ಕಾಡಾನೆಗಳು ಕಾಣಿಸಿಕೊಂಡರೆ ಯಾವುದೇ ಕಾರಣಕ್ಕೂ ಅವುಗಳ ಸಮೀಪ ಹೋಗಬಾರದು, ಒಬ್ಬೊಬ್ಬರಾಗಿ ಸಂಚರಿಸಬಾರದು ಹಾಗೂ ಅನುಮಾನಾ ಸ್ಪದ ಚಲನವಲನ ಕಂಡುಬಂದರೆ ತಕ್ಷಣ ಅರಣ್ಯ ಇಲಾಖೆಗೆ ಮಾಹಿತಿ ನೀಡುವಂತೆ ಮನವಿ ಮಾಡಿದರು.

ಸಾರ್ವಜನಿಕರ ಸುರಕ್ಷತೆ ಅರಣ್ಯ ಇಲಾಖೆಯ ಮೊದಲ ಆದ್ಯತೆಯಾಗಿದೆ. ಕಾಡಾನೆಗಳ ಚಲನವಲನದ ಕುರಿತು ಗ್ರಾಮಸ್ಥರಿಗೆ ನಿರಂತರ ಮಾಹಿತಿ ನೀಡಲಾಗುತ್ತಿದೆ. ಸಾರ್ವಜನಿಕರು ಇಲಾಖೆಯ ಸೂಚನೆಗಳನ್ನು ಪಾಲಿಸಿ ಎಚ್ಚರಿಕೆಯಿಂದ ವರ್ತಿಸಿದರೆ ಅನಾಹುತಗಳನ್ನು ತಪ್ಪಿಸ ಬಹುದೆಂದು ವಲಯ ಅರಣ್ಯಾಧಿಕಾರಿ ಹೇಮಂತ್ ಕುಮಾರ್ ತಿಳಿಸಿದರು.

ಗ್ರಾಮಗಳಲ್ಲಿ ಧ್ವನಿವರ್ಧಕಗಳ ಮೂಲಕ ಮುನ್ನೆಚ್ಚರಿಕೆ ಘೋಷಣೆಗಳನ್ನು ಮಾಡಲಾಗಿದ್ದು, ಕಾಡಾನೆಗಳ ಚಲನವಲನದ ಕುರಿತು ಜನರಿಗೆ ಜಾಗೃತಿ ಮೂಡಿಸಲಾಗಿದೆ. ಕಾಡಾನೆ ಹಾವಳಿ ಇರುವ ಪ್ರದೇಶಗಳಲ್ಲಿ ಇಲಾಖೆ ನಿರಂತರ ನಿಗಾವಹಿಸಿದ್ದು, ಪರಿಸ್ಥಿತಿಯನ್ನು ಹತೋಟಿಯಲ್ಲಿಡಲು ಅಗತ್ಯ ಕ್ರಮ ಕೈಗೊಳ್ಳುತ್ತಿದೆಂದು ಅರಣ್ಯ ಇಲಾಖೆ ತಿಳಿಸಿದೆ.

## ಸುಂಡೇನಹಳ್ಳಿಯಲ್ಲಿ 4 ಟಗರು, 2 ಮೇಕೆ ಕಳವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮನೆ ಸಮೀಪದ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ 4 ಟಗರು, 2 ಮೇಕೆ ಹಾಗು 3 ಹೋತಗಳನ್ನು ರಾತ್ರೋ ರಾತ್ರಿ ಕಳವು ಮಾಡಿರುವ ಘಟನೆ ತಾಲ್ಲೂಕಿನ ಸುಂಡೇನ ಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ಗೀತಾ ಎಂಬುವವರು ಜೂ.20ರ ಸಂಜೆ 7 ಗಂಟೆಗೆ ಮನೆ ಪಕ್ಕದ ಕೊಟ್ಟಿಗೆಯಲ್ಲಿ 4 ಟಗರು, 2 ಮೇಕೆ ಮತ್ತು 3 ಹೋತಗಳನ್ನು ಹಾಕಿ, ದನಗಳನ್ನು ಕಟ್ಟಿಹಾಕಿ ಬೀಗ ಹಾಕಿಕೊಂಡು ಹೋಗಿದ್ದರು. ಮಾರನೇ ದಿನ ಬೆಳಿಗ್ಗೆ ದನಗಳನ್ನು ಹೊರಗೆ ಕಟ್ಟಲೆಂದು ಬಂದಾಗ ಬಾಗಿಲಿನ ಚಿಲಕ ಮುರಿದಿರುವುದು ಗೊತ್ತಾಗಿದೆ. ತಕ್ಷಣವೇ ಪರಿಶೀಲಿಸಿದಾಗ ಸಾಕು ಪ್ರಾಣಿಗಳು ನಾಪತ್ತೆ ಯಾಗಿದ್ದವು. ಎಲ್ಲಾ ಕಡೆ ಹುಡುಕಿದರೂ ಪತ್ತೆಯಾಗಿಲ್ಲ. ಕಳುವಾಗಿರುವ ಪ್ರಾಣಿಗಳ ಒಟ್ಟು ಮೌಲ್ಯ 1.45 ಲಕ್ಷ ರೂ. ಆಗಿದೆ. ಶ್ರವಣಬೆಳಗೊಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK